ಕೊರವಂಜಿ



Koravanji

ಏಪ್ರಿಲ್

೧೯೬೨

★

ಸಂಪಾದಕರು

ಶ್ರೀ॥ ರಾ. ಶಿ.

ಬರಹಗಾರರು:

ಶ್ರೀ॥ ರಾಶಿ

ಶ್ರೀ॥ ಬಚ್ಚ

ಶ್ರೀ॥ ಕವಿಕುಲಲಾಮ

ಶ್ರೀ॥ ಕುಮಾರ್

ಶ್ರೀ॥ "ಕೇಫ"

ಶ್ರೀ॥ ಪ್ರಸಾದ್

ಶ್ರೀ॥ ಅ. ರಾ. ಸೇ.

ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ

ತಿಳಿನಗೆಯ ಮಾಸಪತ್ರಿಕೆ

ಯುಗಾದಿ ವಿಶೇಷಾಂಕ

ಸಂಪುಟ ೨೧ ಏಪ್ರಿಲ್ ೧೯೬೨ ಸಂಚಿಕೆ ೧

ಹೊಸ ವರುಷ

ನವ ಸಚಿವ ಸಂಪುಟ

ಶುಭಕೃತ್ತಿನ ಶುಭಾಶಯಗಳು

ಕೊರವಂಜಿಯು ಈ ಪಾಡ್ಯಕ್ಕೆ ಇಪ್ಪತ್ತೊಂದರ ಪ್ರಾಯಕ್ಕೆ ಮುಗ್ಗರಿಸುತ್ತಾಳೆ.

ಕಾಡಿನ ಮಡಿಲಲ್ಲಿ ಹುಟ್ಟಿದ ಮಗಳು, ಊರಿಗೆ ಬಂದು ಕಣಿ ಹೇಳುತ್ತಾ ನಕ್ಕು ನಗಿಸಿ ಬೆಳೆದಿದ್ದಾಳೆ. ಬೆಳೆದಿದ್ದಾಳೆ ಅನ್ನುವುದಕ್ಕಿಂತ ಬದುಕಿದ್ದಾಳೆ ಎನ್ನಬೇಕು.

ಅವಳ ಕೈಲಿ ಕಣಿ ಹೇಳಿಸಿದ ಸಮಸ್ತ ಬರಹ, ವ್ಯಂಗ್ಯಚಿತ್ರ, ಬಂಧುಗಳಿಗೂ ಕಣಿ ಕೇಳಿ ನಕ್ಕು ಪ್ರೋತ್ಸಾಹಿಸಿದ ಮೆಚ್ಚಿನ ಓದುಗರಿಗೂ, ಜಾಹಿರಾತುಗಳನ್ನು ಕೊಟ್ಟು ರಕ್ಷಿಸಿದ ಒಲವಿನ ದೊಡ್ಡಪ್ಪಗಳಿಗೂ ಕೊರವಂಜಿಯು ಹೊಸ ವರುಷದಲ್ಲಿ ತುಸು ಹರುಷ ಹೆಚ್ಚಾಗಲಿ ಎಂದು ಮನಸಾರೆ ಬಯಕೆ ಪಡುತ್ತಾಳೆ.

೨೧ರ ಪ್ರಾಯಕ್ಕೆ ಬೀಳುವಾಗ ತಂದೆಯ ಮನೆಯನ್ನು ಬಿಟ್ಟು ತನ್ನ ಗಂಡನ ಮನೆಗೆ ಹೋಗಬಯಸುವುದು ಸ್ವಾಭಾವಿಕ; ಸಹಜ ಅಲ್ಲವೆ?

ಈಗಿನ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಗಂಡನ ಮನೆ ಎಂದರೆ ಆಳುವ ಸರ್ಕಾರವೇ ಆಗಿದೆ. ಸರ್ಕಾರದ ಮೆಚ್ಚುಗೆಯನ್ನು ಪಡೆಯಲು ಬೆಂಬಲವನ್ನು ಕೋರಲು ಕೊರವಂಜಿಯು ಕಾನೂನು ರೀತ್ಯಾ ಕುಣಿದಾಡಿದಳು. ಆಯಿತು.

ಆದರೆ ಹಳೆಯುಗಾದಿ ಕೇಳಿಲ್ಲವೇ? ಕೂರೆ ಸೇರಿತು ಅಂತ ಸೀರೆನೇ ಬಿಚ್ಚಿ ಹಾಕಿದರು ಅಂತ. ಹಾಗೆ ಕಾಮಾಲೆ ಹಿಡಿದ ಮೋಸ ಪತ್ರಿಕೆಗಳು ಸೇರಿಕೊಂಡಿತು ಎಂದು ಸರ್ಕಾರದವರು ಜಾಹಿರಾತು ರಕ್ಷಣೆಕೊಡುವ ಸೀರೆಯನ್ನೇ ಬಿಚ್ಚಿಹಾಕಿ ಬಿಟ್ಟಿದ್ದಾರೆ. ಕೂರೆಗಳನ್ನು ನಿರ್ಮೂಲಮಾಡಲು ಬೆದರಿಕೊಂಡು ಸೀರೇನೆ ಎಸೆದು ಬಿಟ್ಟು ನಿಂತಿದ್ದಾರೆ.

ಹೊಸ ವರುಷದಲ್ಲಿ ನವ ಸಚಿವ ಸಂಪುಟವು ಕನ್ನಡ ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡಿದೆ. ಈ ಸಚಿವ ಸಂಪುಟಕ್ಕಾದರೂ ಧೈರ್ಯಮಾಡಿ ಅತ್ಯಗತ್ಯವಾಗಿ ಮಾಡಬೇಕಾದ ಕನ್ನಡಮ್ಮನ ಕಣಿ ಹೇಳುವವರಿಗೆ ಪ್ರೋತ್ಸಾಹವನ್ನು ಕೊಡುವ, ಬುದ್ಧಿ ಬರಲಿ ಎಂದು ಕೊರವಂಜಿಯು ಕಾಡು ನಾಡಿನ ಹಿನ್ನೆಲೆಯಲ್ಲಿ ಎಲ್ಲವನ್ನು ನಡೆಸುತ್ತಲಿರುವ ಆದಿ ದೇವನನ್ನು ಮಂಡಿಯೂರಿ ನಮಸ್ಕರಿಸಿ ಪ್ರಾರ್ಥಿಸುತ್ತಾಳೆ.

ಹೊಸ ವರುಷವು ನವ ಕನ್ನಡನಾಡಿಗೆ ಶುಭವನ್ನು ತರಲಿ.

★ ಕುಹಕಿಡಿಗಳು ★

ಕಾಮನ ಹಬ್ಬದ ಹೊತ್ತಿಗೆ ಸರಿಯಾಗಿ ಸಚಿವ ಸಂಪುಟವನ್ನು ಪೂರ್ಣಗೊಳಿಸಿದ್ದಿದ್ದರೆ.

—ಉಳಿದ ಸಂಬಂಧಿಗರು ಲಬೋ ಲಬೋ ಯಥಾರ್ಥವಾಗಿ ಆಚರಿಸುತ್ತಾರಲ್ಲ ಅಂತ ವಿಳಂಬ ಮಾಡಿದರಂತೆ.

* * * *

ನನ್ನ ಹೆಂಡತೀನೆ ವಾಶಿ, ಜಿರಳೇಗಿಂತ. ಅವಳು ಜೋಬನ್ನು ಖಾಲಿ ಮಾಡ್ತಾಳೆ ಈ ಮುಂಡೇದು ಜೇಬನ್ನೇ ತಿನ್ನುತ್ತೆ ಎಂದೊಬ್ಬರು ರೇಗಿದ್ದಾರೆ.

* * * *

ಅಣು ಪ್ರಯೋಗ ಶಾಲೆಯನ್ನು ಮದ್ರಾಸಿನಲ್ಲಿ ಸ್ಥಾಪಿಸಿ ಎಂದು ಅಲ್ಲಿನವರು ಒತ್ತಾಯಪಡಿಸುತ್ತಿದ್ದಾರಂತೆ.

—ಅಲ್ಲಿನ ಶಿಖೇನೆ ಸಾಲದೆ ಸುಡುಕ್ಕೆ! ಇದೂ ಬೇಕೇ?

* * * *

೧೯೬೭ ಬರಲಿ, ಇವರ ಕೊಸೆ ಕಿತ್ತು ಹಾಕಿಬಿಡ್ತೀನಿ ಎಂದು ಠೇವಣಾತಿ ಕಳಕೊಂಡಾತನೊಬ್ಬ ಬೊಗಳೆ ಬಿಡ್ತಾನೆ ಇಧಾನೆ; ಇನ್ನೂನು.

* * * *

ನೀತಿ, ಕಿಂಚಿತ್-ಮಣಿಗಳು

೧

ಒಂದೂರಿನಲ್ಲಿ ಒಂದೇ ಒಂದು ಆಸ್ಪತ್ರೆ ಇತ್ತು. ಆಸ್ಪತ್ರೆಯ ಸಿಬ್ಬಂದಿಯವರು ಮಾಂಸದ ಸಾರವನ್ನು ಔಷಧಿಗಳಿಗೆ ಉಪಯೋಗಿಸುತ್ತಾರೆ ಎಂದು ವದಂತಿ ಹಬ್ಬಿತ್ತು. ಆದುದರಿಂದಲೇ ರೋಗಿಗಳು ಬೇಗ ಗುಣಮುಖರಾಗುತ್ತಾರೆ ಎಂದು ಸುದ್ದಿಯೂ ಹರಡಿತ್ತು. "ಹೇಗಾದರೂ ಆಗಲಪ್ಪ ಬೇಗ ಚಿಕಿತ್ಸೆ ಮಾಡುತ್ತಾರೆ" ಎಂದು ಆರೋಗ್ಯ ಹೊಂದಿದ ರೋಗಿಯೊಬ್ಬ ರಾಮ ಭಜನಾಮಂದಿರದ ಕಾರ್ಯದರ್ಶಿಗಳಿಗೆ ಮೆಚ್ಚುಗೆಯಿಂದ ಹೇಳಿದ.

ರಾಮ ಭಜನಾಮಂದಿರದ ಕಾರ್ಯದರ್ಶಿ ಹದಿನಾರಾಣೆ ಶಾಖಾಹಾರಿ. ಎಂಥೆಂಥ ಮಾಂಸವನ್ನೆಲ್ಲ ಹಾಕಿ ಏನೇನು ಔಷಧಿ ಮಾಡ್ತಾರೋ ಈ ಹಾಳು ಆಸ್ಪತ್ರೆಯವರು ಎಂದು ಮನಸ್ಸಿನಲ್ಲೇ ಶಪಿಸಿದ.

ಒಂದು ದಿನ ಅವನಿಗೆ ಹೊಟ್ಟೆನೋವು ಬಂತು ಆಸ್ಪತ್ರೆಗೆ ಹೋದರೆ ಇನ್ನೇನು ಮಾಡಿ ಜಾತಿ ಕೆಡಿಸ್ತಾರೋ ಅಂತ ಅವನೇ ಮನೆ ಔಷಧಿ ಮಾಡುಕ್ಕೆ ಶುರು ಮಾಡಿದ. ಹೊಟ್ಟೆನೋವು ಪರಿಣಾಮ ಶೂಲೆಗೆ ತಿರುಗಿಕೊಂಡಿತು. ಅದು ಉಲ್ಬಣವಾಯಿತು. ಹೊಟ್ಟೆ ಉಬ್ಬರಿಸಿಕೊಂಡಿತು. ಉಸಿರು ಸಿಕ್ಕಿಹಾಕಿಕೊಂಡಿತು, ಕಣ್ಣನ್ನು ತೇಲ್ಗಣ್ಣು ಮೇಲ್ಗಣ್ಣು ತಿರುಗಿಸಿದ. ಗೊಟಕ್ಕಂತ ಸತ್ತುಹೋದ.

ನೀತಿ—ಹೆಚ್ಚು ಜನರ ಅಭಿಮತದಂತೇ

ಮತ ಇಡಬೇಕು

ಅಥವಾ

ಮೈನಾರಿಟಿಗಳು ಸಂಕಟ ಪಡಲೇಬೇಕು

* * * *

ಆಂಜನೇಯನ ಗುಡಿ ಸಂದಿಲ್ಲವೇ? ಅದರ ತುದಿಯಲ್ಲೇ ಗರುಡಿಮನೆ ಇರೋದು. ಗರಡಿಮನೆ ವೆಂಕಾನಾಯ್ಕ ಊರಲ್ಲೆಲ್ಲ ಪ್ರಸಿದ್ಧಿ. ಅವನು ಕುಸ್ತಿ

ಗಿಳಿದರೆ ಅಖಾಡಾನೇ ನಡುಗ್ತಾ ಇತ್ತು. ಒಂದು ದಿನ ಅವನು ಹಾರಾಡೋ ತರಕಾರೀನ ಕೊಂಡುಕೊಂಡು ಬರುಕ್ಕೆ ಅಂತ ಮಾರುಕಟ್ಟೆಗೆ ಹೋದ. ದೇಹಕ್ಕೆ ಪುಷ್ಟಿಕೊಡೋ ತರಕಾರೀನ ಖುದ್ದು ತಾನೇ ಅಜಮಾಯಿಷಿಮಾಡಿ ತರಬೇಕು ಎಂದೇ ಅವನ ನಂಬಿಕೆ. ಒಂದು ದಿನ ಮಾರುಕಟ್ಟೆಗೆ ಹೋದ. ಅಲ್ಲಿ ರೆಕ್ಕೆ ಚೆನ್ನಾಗಿದೆ, ಸಾಕಷ್ಟು ಹಸನಾಗಿವೆ ಅಂತ ಒಂದು ಜತೆ ಕೋಳೀನ ಕೊಂಡು ಕೊಳ್ಳುತ್ತಾ ಅಂಗಡಿಯವನಿಗೆ ಹುಷಾರು ಕೊಟ್ಟ

"ನೋಡಪ್ಪಾ ! ಮನೆಗೆ ಹೋಗಿ ಅಡಿಗೆ ಮಾಡಿಸಿ ತಿಂತೀನಿ. ಚಂದಾಗಿಲ್ದೆ ಇದ್ರೆ ನಾಳೆ ಬಂದು ಹಲ್ಲು ಉದರಿಸ್ತೀನಿ" ಎಂದು

ಆ ಊರಿಗೆ ಹೊಸದಾಗಿ ಬಂದಿದ್ದ ವ್ಯಾಪಾರಿಯೊಬ್ಬ ಮಾರುಕಟ್ಟೆಗೆ ಬುಟ್ಟಿಗಳನ್ನು ಮಾರುಕ್ಕೆ ಬಂದಿದ್ದ. ವೆಂಕಾನಾಯ್ಕ ಯಾರು ಎನ್ನೋದು ಅವನಿಗೆ ಗೊತ್ತಿರಲಿಲ್ಲ. ವೆಂಕಾನಾಯ್ಕ ಅಂಗಡಿಯವನಿಗೆ ಹುಷಾರು ಕೊಟ್ಟು, ಬಲಗೈಯಲ್ಲಿ ಮೀಶೆ ತಿರುವ್ತಾ, ಎಡಗೈಯಲ್ಲಿ ಕೋಳಿ ಜತೇನ ಆಡಿಸ್ತಾ ಇದ್ದಾಗ, ಈ ವ್ಯಾಪಾರಿ ನಗಲು ಆರಂಭಿಸಿದ. ಬಿಕ್ಕಿ ಬಿಕ್ಕಿ ನಕ್ಕ. ವೆಂಕಾನಾಯ್ಕ ಇವನಕಡೆ ತಿರುಗಿ ನೋಡಿದ

"ಏನಾಯ್ತಲ್ಲ ಹಿಂಗೆ ನಗ್ತಿ ?" ಎಂದು ಕೇಳಿದ.

"ಅಲ್ಲಾ ! ಕಣ್ಲಾ ಹಲ್ಲು ಉದರಿಸ್ತೀನಿ ಅಂತೀಯಲ್ಲ! ಕೋಳಿ ಬಾಯ್ಲಿ ಹಲ್ಲೆಲ್ಲಿದೆ ಹೇಗೆ ಉದರಿಸ್ತೀ ? ಅದಕ್ಕೆ ನಕ್ಕೆ" ಎಂದ ವ್ಯಾಪಾರಿ.

"ಹೀಗೆ" ಅಂತ ವೆಂಕಾನಾಯ್ಕ ಮೀಶೆಮೇಲಿನ ಕೈತೆಗೆದು ವ್ಯಾಪಾರಿ ಕಪಾಳಕ್ಕೆ ಒಂದು ಮಡಗಿದ. ವ್ಯಾಪಾರಿಯ ಮೂರು ಹಲ್ಲು ಉದುರಿ ಹೋಯ್ತು. ನಗು ಹೋಗಿ ಅಳುಮೂಡಿತು ಆಗ ವೆಂಕಾನಾಯ್ಕ ನಕ್ಕ. ಅಂಗಡಿಯವನೂ ನಕ್ಕ.

ನೀತಿ—ಪ್ರಾಣಿಗಳೊಳು ದಯೆ ಇಡಬೇಕು

ಅಥವಾ ಅದನ್ನು ತಿಂದರೆ

ಹೊಸ ಹಲ್ಲು ಕಟ್ಟಿಸಿಕೊಳ್ಳಬೇಕು.

* * *

ಹೊಸಾ ಹೊಸ ಸಾಹುಕಾರ ಸುಮಾರು ಹಣ ಹಾಕಿ ದೊಡ್ಡದೊಂದು ಮೋಟಾರು ಕಾರನ್ನು ದಿಳ್ಳಿಯಿಂದ ಕೊಂಡುಕೊಂಡು ಬಂದು ಊರಿನಲ್ಲಿ ಮೆರೆಸುತ್ತಾ ಇದ್ದ. ಒಂದು ದಿವಸ ಮೋಟಾರು ಬೀಸಿದ ಕವಣೆಕಲ್ಲಿನ ಹಾಗೆ ಸುಂಯ್

ಅಂತ ಹೋಗೋದು ಬಿಟ್ಟು. ಸೀರ್‌ಫೋರ್ ಅಂತ ಬೆಕ್ಕಿನ ಮದುವೇಲಿ ಹೂಡೋ ಓಲಗದ ತರಹ ಶಬ್ದ ಮಾಡುಕ್ಕೆ ಆರಂಭಿಸಿತು.

" ನಿಲ್ಲಿಸೋ! ಏನಾಗಿದೆಯೋ ನೋಡೋ " ಎಂದು ಡ್ರಾಯುವರನಿಗೆ ಹುಕುಂ ಮಾಡಿದ ಸಾಹುಕಾರ.

ಗಾಡಿ ನಿಲ್ಲಿಸಿ ಡ್ರಾಯುವರನು ಇಳಿದು, ಬಾನೆಟ್ಟನ್ನು ಎತ್ತಿ ಒಳಗೆಲ್ಲಾ ನೋಡಿದ. "ಎಂಜಿನ್ ಮಿಸ್ಸಿಂಗ್ ಸಾರ್, ಮನೆಗೆ ಹೋಗಿಬಿಡೋಣ. ಆ ಮೇಲೆ ರಿಪೇರೀಗೆ ವರ್ಕ್‌ಷಾಪಿಗೆ ತೊಗೊಂಡು ಹೋಗ್ತೀನಿ " ಎಂದ

ಹೊಸಾ ಹೊಸ ಸಾಹುಕಾರರಿಗೆ ಕೋಪಬಂತು. ಅಷ್ಟು ಹಣ ಸುರಿದು ಚಾಣಕ್ಯಪುರದಲ್ಲಿ ಬಿಳಿಯೋರ ಹತ್ತಿರಾನೇ ಕೊಂಡು ತಂದಿದೀನಿ. ಅವರೇನು ಅಷ್ಟು ಮೋಸಮಾಡ್ತಾರ್ಯೇ? ಎಂಜಿನ್ನೇ ಇಲ್ಲದ ಮೋಟಾರು ಕಾರು ಮಾರ್ತಾರ್ಯೇ! ಇಲ್ಲ, ಈ ಡ್ರಾಯವರ ಏನೋ ಮೋಸ ಮಾಡ್ತಿದ್ದಾನೆ ಅಂತ ಕೋಪಬಂತು. ಸಾಹುಕಾರರು ಗಾಡಿಯಿಂದ ಇಳಿದರು. ಎಲ್ಲಾ ತಿಳಿದವರಹಾಗೆ ಗಾಡೀ ಪರೀಕ್ಷೆಗೆ ಹೊರಟರು ಎತ್ತಿದ ಬಾನೆಟ್ ಕೆಳಗೆ ತಲೆ ಹಾಕಿದರು. ಆ ತಂತಿ ಈ ತಂತೀನ ಹಿಡಿದು ಅಳ್ಳಾಡಿಸಿ ಅಮುಕಿದರು. ಅದನ್ನ ಇದನ್ನ ಮುಟ್ಟಿ ನೋಡಿದರು. ಹಿಡಿದು ಆಡಿಸಿದರು.

ಧಡಮ್ಮಂತ ಬಾನೆಟ್ ಅವರ ಕತ್ತಿನ ಮೇಲೆ ಬಿತ್ತು. ಸಾಹುಕಾರರ ಕತ್ತಿನ ಮೇಲೆ ಕೊಬ್ಬಿನ ದಿಂಬು ದಪ್ಪನಾಗಿದ್ದದ್ದರಿಂದ ಕತ್ತು ಕಳಚಿಕೊಳ್ಳಲಿಲ್ಲ. ಭಾರೀ ನೋವಾಯ್ತು. ಡ್ರಾಯುವರನಮೇಲೆ ರೇಗ್ತಾ ಗಾಡಿಯೊಳಕ್ಕೆ ಹೋಗಿ ಕೂತರು.

ನೀತಿ. ನಿನ್ನ ಕೆಲಸ ನೀನು ಮಾಡಿಕೊಳ್ಳಲು ತಿಳಿದಿದ್ದರೆ, ಆಗ ಲಾಯರ ಹತ್ತಿರ ಹೋಗು.

ಅರ್ಜುನ ಪ್ರಶಸ್ತಿಯನ್ನು ಸುಭದ್ರೇಗೆ ಕೊಟ್ಟಿದ್ದರೆ ಚೆನ್ನಾಗಿತ್ತು.

*　*　*　*

ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ಒತ್ತಾಯಪಡಿಸಲಾಗಿದೆಯಂತೆ.

—ಸದ್ಯ! ನಾಳೆ ಬರೋ ಸೀರೆ ನೆಚ್ಚಿಕೊಂಡು ಇವತ್ತು ನದೀಲಿ ಸ್ನಾನಕ್ಕೆ ಇಳಿದ್ಹಾಗೆ ಆಗುತ್ತೆ. ಈ ಸುದ್ದಿಯನ್ನು ಈಗಲೇ ನಂಬಿದರೆ

*　*　*　*

ಮಟ್ಟ ಏರಿದೆ

——:o:——

ಒಂಟಿ ತಿಮ್ಮನಪಾಳ್ಯ ಪ್ರದೀಪನಗರವೆನಿಸಿಕೊಂಡಮೇಲೆ ನಾನು ಆಕಡೆ ಹೋಗಿಯೇ ಇರಲಿಲ್ಲ. ಮೊನ್ನೆ ಹೋಗಿಬಂದೆ. ಆ ಊರಿಗೆ ತಾಂತ್ರಿಕ ಕಾಲೇಜೊಂದು ಬಂದಮೇಲೆ ಕಾಲೇಜು ಬರಲು ಕಾರಣೀಭೂತರಾದವರ ಹೆಸರೇ ಊರಿಗೂ ಬಂತು. ಮಾತ್ರವಲ್ಲದೆ ಅರೆನಿದ್ದೆಯಲ್ಲಿದ್ದ ಹಳ್ಳಿಯಲ್ಲಿ ಚಟುವಟಿಕೆ ತುಂಬಿ ತುಳುಕಿತು.

ಮಾವನ ಮನೆಯಲ್ಲಿ ಸಾರನ್ನ ಕಲಿಸುತ್ತ 'ನಿಮ್ಮೂರು ತುಂಬ ಸುಧಾರಿಸಿತಲ್ಲವೆ' ಮಾವ ಎಂದೆ.

ಮಾವ ಒಂದು ಕ್ಷಣ ನನ್ನನ್ನೇ ನೋಡಿ ಗುಟುಕು ನೀರು ಕುಡಿದು ಗಂಟಲು ತೊಳೆದುಕೊಂಡು ಪ್ರಾರಂಭಿಸಿದರು.

"ಹೌದು ತುಂಬ ಸುಧಾರಿಸಿದೆ ನಮ್ಮ ಜೀವನಮಟ್ಟ" ಎಂದರು.

"....ತರಕಾರಿ ಕಾಣಸಿಗುವುದಿಲ್ಲ, ಮೊಸರು ಬೆಣ್ಣೆ ದುರ್ಲಭ, ಹಾಲು ತಣ್ಣೀರು, ಸೌದೆ ಸಿಗುಲ್ಲ ನೀರಿಗೂ ಅಭಾವ, (ಸಿನಿಮಾ ಬಂದಿದೆ) ಕಳ್ಳತನ ಹೆಚ್ಚಿದೆ ಇಷ್ಟಿದ್ದರೆ ಜೀವನಮಟ್ಟ ಸುಧಾರಿಸಿದಂತೆಯೇ ಅಲ್ವೆ?" ಎಂದು ಅವರು ನಾಲಿಗೆ ಝಳಪಿಸಿದಾಗ—

"ಪ್ರದೀಪನಗರ ಒಂಟಿ ತಿಮ್ಮನಪಾಳ್ಯವಾಗಿದ್ದಿದ್ದರೇ ಲೇಸಂತೀರ?" ಎಂದೆ.

"ಹಾಗೇನಿಲ್ಲ ಎರಡಕ್ಷರಕ್ಕೆ ಬೇಕಾಗುವಷ್ಟು ಮಸಿ ಉಳಿಯಿತು—ಮಸಿ; ಒಂ. ತಿ. ಪಾಳ್ಯ ಪ್ರದೀಪನಗರವಾಗಿ" ಎಂದರು ಮಾವ.

"ಆದರೆ ನಾವು ಬಾಡಿಗೆಗೆ ಕೊಟ್ಟ ಮನೆಗಳ ಬಾಡಿಗೆ ಒಂದಕ್ಕೆರಡಾದುದರಿಂದ ಬದುಕಿಕೊಂಡೆವಪ್ಪ" ಎಂದರು ಅತ್ತೆ ಖೀರು ಬಡಿಸುತ್ತ.

ಮಾವನ ಮುಖ ನೋಡಿದೆ. ಮಾವ ತಲೆ ತಗ್ಗಿಸಿ ಖೀರು ಸುರಿಯುವುದರಲ್ಲಿ ಮಗ್ನರಾಗಿರುವಂತೆ ತೋರಿಸಿಕೊಂಡರು.

ಒಟ್ಟು ಜೀವನ ಮಟ್ಟ ಏರಿರೋದು ಖಂಡಿತ ಅಂದೆ ಮಾವ ಮಾತನಾಡಲಿಲ್ಲ.

—ರಾಮಿ

“ಙ್ಞ! ಎಂದು ಹೇಳುತ್ತಾ”

—:০:—

ಕನ್ನಡಕವನ್ನು ಭೂಲೋಕದಲ್ಲೇ ಮೊದಲು ಕನ್ನಡ ದೇಶದಲ್ಲಿ ತಯಾರಿಸಿದ್ದರು, ಸಾವಿರದನೂರ ವರ್ಷಗಳಹಿಂದೆ. ಇದಕ್ಕೆ ಓಲೆಗರಿಯಸಾಕ್ಷಿ ಇದೆ, ಎಂದು ಭಂಡಾರಯ್ಯನವರು ಹೇಳಿದಾಗ ನನಗೆ ಸ್ವಲ್ಪ ರೇಗಿತು. ನಮ್ಮ ಪ್ರಾಚೀನಾಮಿತಿ ಸೌಭಾಗ್ಯವನ್ನೇ ಹೇಳಿಕೊಂಡು ಮೆರೆಯುತ್ತೇವೆ ಹೊರತು, ಈಗ ಏನ್ಮಾಡ್ತೀವಿ ಎಂದರೆ ಚುನಾವಣೆ ಮುಗಿಸಿ ಹೊಡೆದಾಡ್ತೀವಿ ಎನ್ನೋ ಸ್ಥಿತಿಯಲ್ಲಿದ್ದೇವೆ. ಆದರೆ ಭಂಡಾರಯ್ಯನವರೊಡನೆ ವಾಗ್ವಾದ ಮಾಡಲು ನನಗೆ ಸಾಕಷ್ಟು ವಿಷಯ ತಿಳಿದಿತ್ತಿಲ್ಲ. ಕನ್ನಡಕವನ್ನು ಮೊದಲು ಯಾರು ತಯಾರಿಸಿದರು ಯಾವ ದೇಶದಲ್ಲಿ ಮೊದಲು ಉಪಯೋಗಿಸಿದರು ಇದೆಲ್ಲವನ್ನೂ ತಿಳಿದುಕೊಂಡು ನಂತರ ಭಂಡಾರಯ್ಯನವರೊಡನೆ ಚರ್ಚೆನಡೆಸಿ ಅವರ ಭ್ರಮೇನ ಹರಿದುಬಿಡೋಣ ಎಂದು ನಿಶ್ಚಯಿಸಿದೆ.

ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಹೋದೆ. ಕನ್ನಡಕದ ವಿಷಯುವನ್ನು ತಿಳಿಯಬೇಕಾಗಲಿ, ಕನ್ನಡದ ಚರಿತ್ರೆಯನ್ನು ತಿಳಿಯಬೇಕಾದರೂ, ಇಂಗ್ಲೀಷಿನ ಎನ್ಸೈಕ್ಲೋಪೀಡಿಯಾವನ್ನೇ ಹಿಡಿಯಬೇಕಲ್ಲ!! “Specacles” ಶಬ್ದವಿದ್ದ ಧಡೂತಿ ಗ್ರಂಥವನ್ನು ತೆಗೆದೆ. ನಿಲುಮೇಜಿನ ಮೇಲೆ ಇರಿಸಿಕೊಂಡು, ನಟರಾಜನ ತರಹ ಒಂದು ಸೊಟ್ಟನೆಕಾಲು ಒಂದು ಬಾಗಿಸಿಟ್ಟಕಾಲುಮಾಡಿ ನಿಂತುಕೊಂಡು ಓದಲಾರಂಭಿಸಿದೆ. ನಿಲುಮೇಜಿನ ಮುಂದೆ ನಾಲ್ಕಾರು ಜನ ನಡೆದು ಹೋದುದು ಮಸುಕು ಮಸುಕಾಗಿ ತಿಳಿಯಿತು. ಆದರೂ ಓದುತ್ತಿದ್ದ ವಿಷಯ ಬಲುಸ್ವಾರಸ್ಯವಾಗಿದ್ದುದರಿಂದ ಯಾರು ಹೋದರು, ಯಾವಳು ಬಂದಳು ಒಂದನ್ನೂ ಗಮನಿಸಿ ನೋಡಲಿಲ್ಲ

ಅರ್ಧ ಗಂಟೆಯಾಗಿರಬಹುದು. ನನ್ನ ಪಕ್ಕದಲ್ಲೇ, ನನ್ನಂತೆ ಮುದುಕರಾಗಿದ್ದವರೊಬ್ಬರು ಅರ್ಥ ಗರ್ಭಿತವಾಗಿ ಕೆಮ್ಮಿದರು. ಪುಸ್ತಕದಿಂದ ಕಣ್ಣು ತೆಗೆದು, ಕೆಮ್ಮು ಬಂದ ಕಡೆಗೆ ಹಾಯಿಸಿದೆ. ಯಾರು ಅಂತೀರಿ? ಅವರು! ಸಾಕ್ಷಾತ್ ಪುಸ್ತಕ ಭಂಡಾರದ ಕಾರ್ಯದರ್ಶಿಗಳು!!

“ಏನ್ಸ್ವಾಮಿ! ಇಷ್ಟುದೂರ ಬಂದಿರಿ. ಆರೋಗ್ಯವಾಗಿದ್ದೀರಾ?” ಎಂದೆ ಯಾರೊ ಬಂದಿದ್ದಾರೆ ಎಂದು ತಿಳಿಯಿತು. ಏನಾದರೂ ಸೇವೆ ನನ್ನಿಂದ ಆಗಬೇಕೇ

ಎಂದು ವಿಚಾರಿಸಿಕೊಂಡು ಹೋಗೋಣ ಅಂತ ಬಂದೆ ಬಂದು ನೋಡಿದರೆ ನೀವು." ಎಂದು ಹೇಳಿ ನಗಲಾರಂಭಿಸಿದರು.

"ಯಾಕಯ್ಯಾ? ಹಾಗೆ ನಗ್ತೀರಿ" ಎಂದೆ. ಹಳೆ ಪರಿಚಯ.

"ನನ್ನ ಕೊಠಡಿಗೆ ಹೋಗೋಣ ಬನ್ನಿ, ಅಲ್ಲಿ ವಿವರಣೆ ಕೊಡ್ತೀನಿ ಹಾಗೇ ಒಂದು ಒಟ್ಟಲು ಕಾಫೀನೂ ತರಿಸಿಕೊಡ್ತೀನಿ ಆಮೇಲೆ ಬೇಕಾದರೆ ಬಂದು ತಿರುಗಿ ನಿಮ್ಮ ವ್ಯಾಸಂಗ ಮುಗಿಸುವಿರಂತೆ" ಎಂದು ಹೇಳಿದರು ಕಾರ್ಯದರ್ಶಿಗಳು.

"ಅವರ ಕೊಠಡಿ ಸೇರಿದಮೇಲೆ ಕುರ್ಚಿಯಲ್ಲಿ ಕುಳ್ಳಿರಿಸಿ, ನನ್ನ ಭುಜಗಳೆರಡನ್ನೂ ಹಿಡಿದುಕೊಂಡು ನನ್ನ ಮುಖವನ್ನೇ ನೋಡುತ್ತಾ ಎದುರಿಗೆ ನಿಂತು "ಅಲ್ಲಯ್ಯಾ! ನಿನಗೂ ಹಿಡಿಯಿತೇ ಇಳಿ ವಯಸ್ಸಿನ ಈ ತುರಿಕೆ?" ಎಂದು ಕೇಳಿದರು.

"ನನಗೇನೋ ತುರಿಕೆ" ನಾನೇನು ಮೈ ಕೆರೆದುಕೊಳ್ಳುತ್ತಾ ಇದ್ದೆನೇ? ಈಗ ಕೆರೆದುಕೊಂಡೆನೇ? ನೀನು ಹೇಳೋದು ಅರ್ಥವಾಗುವುದೇ ಇಲ್ಲ" ಎಂದೆ.

"ಜಾಣ ಕಣೋ! ನೀನು! ಸಿಕ್ಕಿಹಾಕಿಕೊಂಡರೂ ಎಷ್ಟು ಸುಲಭವಾಗಿ ನುಣುಚಿಕೊಳ್ಳುತ್ತೀ ಬಲೆ ಭೇಷ್!" ಅಂದ. ಆದರೂ ವಿಶದವಾಗಿ ಹೇಳಲೊಲ್ಲ.

"ಏನೋ ನುಣುಚಿಕೊಳ್ತಾ ಇರೋದು, ಅಂಥಾದ್ದೇನು ನಾನು ಮಾಡಿರೋದು. ಯಾರೂ ಮಾಡಬಾರದ್ದು" ಎಂದು ಸ್ವಲ್ಪ ರೇಗುತ್ತಲೇ ಕೇಳಿದೆ.

"ನಿನ್ನ ವಯಸ್ಸಿನಲ್ಲಿ ನೀನು ಮಾಡ್ತಿರೋದು, ಯಾರೂ ಬಹಿರಂಗವಾಗಿ ಮಾಡೋದಿಲ್ಲ, ಮಾಡಿದರೆ ನಗೆಪಾಟಲು ಅಲ್ಲವೇನಯ್ಯ" ಎಂದ ತಿರುಗಿ.

"ನಿನ್ನ ಮನಸ್ಸಿನಲ್ಲಿರೋದನ್ನು ಬಿಡಿಸಿ ಹೇಳದೇ ಇದ್ದರೆ, ನಿನ್ನ ಕಾಫೀನೂ ಬೇಡ, ನಿನ್ನ ಮಾತೂಬೇಡ, ಹೋಗ್ತೀನಪ್ಪ" ಎಂದೆ ಬಿರುಸಾಗಿ.

"ಹಾಗಾದರೆ ಏನು ಓದುತ್ತಾ ಇದ್ದೆ. ಇಷ್ಟು ಹೊತ್ತೂ ಕಣ್ಣಲ್ಲಿ ಕಣ್ಣಿಟ್ಟು ಕೊಂಡು ಯಾವ ವಿಷಯವನ್ನು ವ್ಯಾಸಂಗಮಾಡ್ತಾ ಇದ್ದೆ" ಎಂದು ಅರ್ಧ ಸಂಶಯ ತುಂಬಿದ ಧ್ವನಿಯಲ್ಲಿ ಕೇಳಿದ. ಎಲ್ಲ ವಿಷಯವನ್ನು ವಿವರಿಸಿ ಹೇಳಿದೆ.

"ಅಯ್ಯೋ! ಹೀಗೇನೋ! ಕ್ಷಮಿಸಪ್ಪ! ನನ್ನ ತಪ್ಪಾಯ್ತು. ಸಿಬ್ಬಂದಿಯವರಲ್ಲೊಬ್ಬರು ಬಂದು ಕಟ್ಟುಮಸ್ತಾಗಿರೋ ಮುದುಕರೊಬ್ಬರು ಎನ್ಸೈಕ್ಲೋಪೀಡಿಯಾದಲ್ಲಿ Sex ಹಾಳೇನ ಬಲು ಮುತುವರ್ಜಿಯಿಂದ ಓದುತ್ತಾ ಇದ್ದಾರೆ. ಎಂದು ಹೇಳಿದರು. ಕಾಲೇಜಿನ ಹೆಣ್ಣು ಮಕ್ಕಳು ಇಲ್ಲಿ ಓದುಕ್ಕೆ ಬರುತ್ತಾರೆ. ಅದಕ್ಕೋಸ್ಕರ ಯಾರು ಆ ಮುದುಕನೋಡೋಣ ಎಂದು ಬಂದೆ. ನೀನಿದ್ದೆ.

ತಿಳಿಯದೆ ಇದ್ದವರಾಗಿದ್ದರೆ ಗುಪ್ತ ಪೋಲೀಸಿನವರಿಗೆ ಟೆಲಿಫೋನ್ ಮಾಡಿ ಮನೆಗೆ ಹೋಗೋತನಕ ನಿನ್ನ ಮೇಲೆ ಅವರು ಕಣ್ಣಿಟ್ಟಿರಲು ಏರ್ಪಾಡು ಮಾಡ್ತಾ ಇದ್ದೆ." ಎಂದು ಹೇಳಿದ.

" ಪುಸ್ತಕ ಭಾಂಡಾರದಲ್ಲಿ ಈ ಪತ್ತೇದಾರಿ ಕೆಲಸವನ್ನು ಎಷ್ಟು ದಿನದಿಂದ ಶುರು ಮಾಡಿದ್ದೀರಿ; ಇದಕ್ಕೆ ಬೇರೆ ಸಂಬಳವನ್ನೇನಾದರೂ ಕೊಡ್ತಾರೆಯೇ ?" ಎಂದು ಆಗ್ರಹದಿಂದ ಕೇಳಿದೆ.

" ಹಾಗಲ್ಲಪ್ಪ ! ಎನ್ಸೈಕ್ಲೋಪೀಡಿಯಾ ಓದುವವರ ಮೇಲೆ ಸಿಬ್ಬಂದಿಯವರು ನಿಗಾ ಇಟ್ಟಿರ್ತಾರೆ. ಅನುಮಾನಾಸ್ಪದವಾದ ವಿಷಯಗಳನ್ನು ಓದುತ್ತಾ ಇದ್ದರೆ ನನಗೆ ಬಂದು ತಿಳಿಸುತ್ತಾರೆ. ನಾನು ಮುಗುಮ್ಮಾಗಿ ಪರಿಶೀಲನೆ ಮಾಡಿ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳುತ್ತೇನೆ.

ಕೆಲವು ದಿನಗಳ ಹಿಂದೆ ನೋಡು, ಪರೀಕ್ಷೆಗೆ ಓದುವ ಯುವಕನೊಬ್ಬ " ಫಾಲಿಡಾಲ್ " ಇದ್ದ ಹಾಳೇನ ನೋಡ್ತಾ ಇದ್ದ. ಸುದ್ದಿ ತಿಳಿದಕೂಡಲೆ ಹೋಗಿ ತನಿಖೆ ಮಾಡಿದಾಗ ಅವನು ಹಾಸ್ಟಲ್ಲಿನಲ್ಲಿರುವನೆಂದೂ ಮಲೆನಾಡ ಕಡೆಯವನೆಂದೂ ತಿಳಿಯಿತು. ಹಾಸ್ಟಲ ವಾರ್ಡನ್ನಿಗೆ ಗೋಪ್ಯವಾಗಿ ಕಾಗದ ಬರೆದು ಕಳಿಸಿದೆ. ಆತ ಇವನ ಕೊಠಡಿಯನ್ನು ತಲಾಷ್ ಮಾಡಿದಾಗ ಫಾಲಿಡಾಲ್ ತುಂಬಿದ್ದ ಶೀಷೆ ಸಿಕ್ಕಿ ತಂತೆ. ಅರ್ಥಂಬರ್ಥ ಬರೆದಿಟ್ಟಿದ್ದ ಕಾಗದವೂ ಸಿಕ್ಕಿತಂತೆ. ಪರೀಕ್ಷೇಲಿ ನಪಾಸಾಗ ಬಹುದು ಅಂತಲ್ಲವಂತೆ ಅವನ ಆತ್ಮಹತ್ಯದ ಪ್ರಯತ್ನಕ್ಕೆ ಕಾರಣ. ಮೂರು ನಾಲ್ಕು ತಿಂಗಳ ಹಿಂದೆ ಪರಿಚಯವಾಗಿದ್ದ, ನೆರೆ ಕಾಲೇಜಿನ ವಿದ್ಯಾರ್ಥಿ ನಿಲಯಕ್ಕೆ ಹೂವು ಸರಬರಾಜು ಮಾಡುತ್ತಿದ್ದ ಪುಟಾಣಿ ಹೂವಾಡಿಗಿತ್ತಿಗೆ ಮದುವೆಯಾಗಿ ಮೂರು ವರ್ಷಗಳಾಗಿದೆ ಎಂದು ತಿಳಿದಿದ್ದೇ ಕಾರಣವಂತೆ. ನನ್ನ ಮುಂಜಾಗ್ರತಾ ಕ್ರಮದಿಂದ ಆ ಹುಡುಗನ ಜೀವ ಉಳಿಯಿತು.

ಹಾಗೇನೇ ಮೂರು ನಾಲ್ಕು ತಿಂಗಳ ಹಿಂದಿನ ಮಾತು. ಮಧ್ಯವಯಸ್ಸಿನ ಸುಮಾರು ಲಕ್ಷಣವಾಗಿದ್ದ ಹೆಂಗುಸೊಬ್ಬಳು. Philtres ಇದ್ದ ಹಾಳೇನ ಓದುತ್ತಾ ಇದ್ದಳು. ಗುಪ್ತ ಪೋಲೀಸಿನವರಿಗೆ ತಿಳಿಸಿದೆ. ಅವರು ಸರ್ಪಗಾವಲು ಹಾಕಿದರು. ಫೋಟೋ ಅಂಗಡಿಯೊಂದನ್ನು ಆಕೆ ನಡೆಸಿಕೊಂಡಿದ್ದಳೆಂದೂ, ಸೈನ್ಯಾಧಿಕಾರಿ ತರುಣನೊಬ್ಬ ತಾನು ತೆಗೆದ ಫೋಟೋಗಳನ್ನು ಅಲ್ಲಿ ವರ್ಧಿಸಲು ಹೋಗುತ್ತಿದ ನೆಂದೂ, ಪಂಜಾಬಿನ ದೊಡ್ಡ ಸರದಾರರ ಹಿರಿಯ ಮಗನವನೆಂದೂ ತಿಳಿಯಬಂತು. ಅವನ ಹಿರಿಯಧಿಕಾರಿಗಳಿಗೆ ಈ ಸುದ್ದಿಯನ್ನು ಮುಗುಮ್ಮಾಗಿ ತಿಳಿಸಲಾಯ್ತು. ಬಲೆಯನ್ನು ಅವನ ಸುತ್ತ ಆಕೆಯ ಬೀಸುತ್ತಿದ್ದಳೆಂದೂ ಹಾಗೆ ಬೀಸುವಾಗ ಪನ್ನೀರು ಚುಮುಕಿಸಿ ತಾನೇ ತನ್ನ ಕೈಯಿಂದ ಪಾನಕಮಾಡಿ ಕುಡಿಸುತ್ತಿದ್ದಳೆಂದೂ ಅವನೇ ಹಿರಿಯಧಿಕಾರಿಗಳ ಹತ್ತಿರ ಹೇಳಿಕೊಂಡನಂತೆ.


ಒಬ್ಬ ತರುಣನ ಬಾಳು ಖರಾಬು ಆಗಿ ಹೋಗುವುದನ್ನು ತಪ್ಪಿಸಿದಂತಾಯಿತ್ತು ಇಂಥಾಹದಹುದೆಷ್ಟೋ? ನಿನಗ್ಯಾಕೆ ಬೇಜಾರು ಪಡಿಸಲಿ. ಆದರೆ ಕಟ್ಟುಮಸ್ತಾದ ಮುದುಕರು sex ಹಾಳೇನ ಓದುತ್ತಾ ಇದ್ದರೆ ಸಮಾಜದ ಹಿತ ರಕ್ಷಣ ದೃಷ್ಟಿಯಿಂದ, ನಾನು ಹುಷಾರಾಗಿರೋದು ನ್ಯಾಯ ಅಲ್ಲವೇನಯ್ಯ!" ಎಂದು ಹೇಳಿದ.

"ನನಗೇನು ಗೊತ್ತು, ಈ ವಿಷಯವೆಲ್ಲಾ! ಆದರೆ ನೀನು ಹೇಳಿದಮೇಲೆ ಸತ್ತ ಪುಸ್ತಕಗಳಿರುವ ಸಾರ್ವಜನಿಕ ಭಾಂಡಾರದಲ್ಲಿಕೂಡ, ಏನೇನು ಮರ್ಮ ಇದೆ ಏನೇನು ಲಕ್ಷಣಗಳನ್ನು ಕಾಣಬಹುದಪ್ಪಾ! ಬಲು ಮೋಜಪ್ಪಾ! ನಿನ್ನ ಕೆಲಸ" ಎಂದು ಉದ್ಗಾರ ತೆಗೆದೆ.

"ಅಂಥಾ ಬೇಜಾರು ಕೆಲಸವೇನೂ ಅಲ್ಲ ಅನ್ನು" ಎಂದ ಕಾರ್ಯದರ್ಶಿ "ಅಂದಹಾಗೆ ಎನ್ಸೈಕ್ಲೋಪೀಡಿಯಾದಲ್ಲಿ sex ಮೇಲಿರೋ ಲೇಖನ ಬರಿ ಸಪ್ಪೆ ಆದನ್ನೇನೊ ಓದುಕ್ಕೆ ಹೋಗಿ ಕಾಲವ್ಯರ್ಥಮಾಡಬೇಡ" ಎಂದ.

"ಆಗ್ಲಿ!" ಎಂದು ಹೇಳುತ್ತಾ ಕಾಫಿ ಮುಗಿಸಿದೆ.

—ಬಚ್ಚ.



ಕ್ರಿಕೆಟ್ ಆಡು ಮಗನೆ! ತಲೆಗೆ ಚೆಂಡು ತಾಕಿದರೆ ಬುದ್ಧಿ ಸರಿಹೋಗಬಹುದು!

‘ಸುಳಿದಳಾವಳು ನಿನ್ನಮನದಲಿ’

....ಶಶಿವಸಂತರ ಬಲುಹು ಮಾನ್ಯರನರಿಯವೇ ?
ತಂಗಾಳಿ ಧಾರ್ಮಿಕನೇ ? ಖಳನಲಾಮಾಕಂದ !

—ಕುಮಾರವ್ಯಾಸ

ಗೆಳೆಯ, ಬಂತು ವಸಂತ ನಗರದ ತಳಿರ ತೋಂಗಲ ಸಂತೆಗೆ
ಎಳೆನಗೆಯ ಕಳೆದೇಕೆಮಾರಿದೆ ನಿನ್ನ ಚಿತ್ತವ ಚಿಂತೆಗೆ
ಸುಳಿದಳಾವಳು ನಿನ್ನ ಮನದಲಿ ಪಳೆಯ ಹರೆಯದ ಬಾಲಕಿ
ಹೊಳೆವ ಕಂಗಳ ಕೊಂಕು ಕುರುಳಿನ ತೊಂಡೆತುಟಿಗಳ ಮಾಲಕಿ—ಪ—

ಬಾನಿನೆತ್ತರ ಬೆಳೆದ ಕೋಮಲೆ ನೀಲಮೇಘಶ್ಯಾಮಲೆ
ಸಗ್ಗಕೆತ್ತಿದ ಏಣಿ ಕುರುಚಲುವೇಣಿ ಅಣಿಯುಗ ದುಶ್ತಳೆ
ಬೀಸುಗಾಲಿನ ಗಿಡುಗ ; ಎಲೆ ಎಲೆ ಹುಡುಗ ಬಿದ್ದೆಯ ಕೆಳಗಡೆ
ಭಯವೊ ಪ್ರೇಮವೊ ಹೇಳು, ಲಂಬೋದರಿಯೇ, ಮನಸಿನ ಒಳಗಡೆ -೧-

ಕೊಡಗು ಕಿತ್ತಳೆ ಬಣ್ಣ ಕೆನ್ನೆಗೆ ಹುಬ್ಬುಗಂಟಿನ ಚೆನ್ನೆಗೆ
ಅವಳ ನೋಡುವುದೊಂದೆ ಇಂದಿಗೆ, ಓದು ನಿನ್ನೆಗೆ ಮೊನ್ನೆಗೆ
ನಗುವೆ ಸುಳಿಯುದು ಅಧರ ಸೀಮೆಗೆ ಇಂದ್ರಧನುವಿನ ಕುಬ್ಜೆಗೆ
ಸೊಗಸಿದಳೆ ನಿನಗವಳು, ಒಲಿದೆಯ ಸ್ಮಿತರಹಿತ ವದನಾಬ್ಜೆಗೆ -೨-

ಏನು ಚಿಂತೆಯೊ ಹುಡುಗ, ನೆನೆದೆಯ ಒಂಟಿಜಡೆಯ ವಿನೀತೆಯ
ಮೋನಲಿಸ ಮುಖ ರೀಟಹೇವರ್ತ್ ಹೃದಯದವಳಿಗೆ ಸೋತೆಯ
ಮಾತು ಮಿತ ಕಣ್ನೋಟಹಿತ ಮೈತುಂಬ ಮುಚ್ಚಿದ ಸೀರೆಯ
ಅಬ್ಬ ಗುಮ್ಮನೆಗುಸುಕಿ ಹೃದಯವ ಹಿಸುಕಿಹಾಕುವ ಪೋರಿಯ -೩-

ರತಿಯಮರಿ, ಮನ್ಮಥನ ನರಿ, ತೆಳುಮೈಯ ಬಿಂಕದ ಬಿತ್ತರಿ
ಮಾತು ನೋಟದ ಹೊಂಚು ಮೈಯಲಿ ಮಿಂಚು ಪ್ರಾಣಕೆ ಕತ್ತರಿ
ತಿರುಗಿ ನೋಡಲು ನಕ್ಕು ಮಬ್ಬಿಗೆ ಸಿಕ್ಕು ಬೆರೆದೆಯ ಮೋಹದಿ
ಕಂಡವಳ ಹಾಹಾರಿ ಗಂಟಲುತಾರಿ ಚಪಲೆಯ ದಾಹದಿ -೪-

ನಿನ್ನ ತಪ್ಪೇನಿಲ್ಲಿ ಯಾವಳೊ ಬೆಲ್ಲಿ ಬುದ್ಧಿಯ ಕದ್ದಳು
ಶಶಿ ವಸಂತ ಮನೋಜ ರುಪಟಳಕೊಡ್ಡಿ ನಿನ್ನನು ಗೆದ್ದಳು
ನೀಲ ಕುಂತಳೆಯೆಂದು ಬರಬರ ನೊಂದು ಮನಸಿಜ ಬಾಣಕೆ
ಮೀನಲೋಚನೆಯೆಂದೆ ಬೆದೆಬೆದೆ ಬೆಂದೆ ಗಂಟಲ ಗಾಣಕೆ -೫-

—ಕವಿಕುಲಲಾಮ.

" ಯಾವ ಪಿಶಾಚಿ ಆದರೇನು? "

ಚೌರಿ ಕಟ್ಟನ್ನು ಬಾಚಿ ಕಟ್ಟಿ ಕೈ ಚೀಲಕ್ಕೆ ಹಾಕ್ತಾ ಇದ್ದಳು ಸರೋಜ, ತನ್ನ ಕೊಠಡಿಯಲ್ಲಿ. ಆ ಹೊತ್ತಿಗೆ ಸರಿಯಾಗಿ ಅಃಖ್ತರ್ ಓಡ್ತಾ ಓಡ್ತಾ ಬಂದು " ಸರು! ಎಲ್ಲಾ ಸಾಮಾನು ಕಟ್ಟಿ ಸಿದ್ಧಮಾಡಿಕೊಂಡಿದ್ದಿಯಾ? ಬಸ್ ಎರಡು ಗಂಟೆಗೆ ಬರುತ್ತಂತೆ, ಮೂರು ಅಂತ ನೋಟೀಸ್ ಬೋರ್ಡ್ ಮೇಲೆ ಹಾಕಿತ್ತಲ್ಲಾ ಅದು ಸರಿಯಲ್ಲವಂತೆ, ವಾರ್ಡನ್ನೇ ಹೇಳಿದರು " ಎಂದು ದಡಬಡ ಹೇಳಿ ಸರೋಜನ ಕೈಲಿದ್ದ ಚೌರಿ ಕಟ್ಟನ್ನು ನೋಡಿ " ಅದೇನೇ? ಯಾರ ಕೂದಲೇ? ಅದನ್ಯಾಕೆ ಕೈಚೀಲಕ್ಕೆ ಹಾಕ್ತಾ ಇದೀ! " ಎಂದು ಆಶ್ಚರ್ಯದಿಂದ ಕೇಳಿದಳು. " ಚೌರಿ ಕಟ್ಟು ಕಣೇ! ಇದನ್ನು ನೋಡೇ ಇಲ್ಲವೇ? ತಲೇಲಿ ಕೂದಲು ಸಾಲದೆ ಇದ್ದಾಗ ಈ ಚೌರಿ ಕಟ್ಟನ್ನು ಸೇರಿಸಿ ಜಡೆ ಕಟ್ಟಿಕೋತೀವಿ. ಯಾತರ ಕೂದಲೋ ಯಾರು ಬಲ್ರಮ್ಮಾ! ಬಹುಶಃ ಕುದುರೇದಿರಬಹುದು " ಎಂದು ಸರೋಜ ಹೇಳಿದಳು. " ಅರೆ! ಸರೋಜ! ನೀನು ಯಾವಾಗಲೂ ಪೋನೀ ಬಾಲ ಕಟ್ತೀಯೇ ಹೊರತು ಜಡೆ ಹಾಕಿದ್ದು ನೋಡೇ ಇಲ್ವಲ್ಲೇ! ಅದಕ್ಕೆ ಚೌರಿ ಕಟ್ಟು ಯಾಕೆ? " ಎಂದು ಸಹಜವಾಗಿಯೇ ಅಃಖ್ತರ್ ಕೇಳಿದಳು. ನಾನು ಪೋನೀ ಬಾಲ ಕಟ್ಟುವಾಗ, ಚೌರಿ ಸೇರಿಸಿ ಕಟ್ಟುಕೋತೀನಿ ಕಣೆ! ಅಂದರೆ ನಿಮಗ್ಯಾರಿಗೂ ಗೊತ್ತೇ ಆಗಿಲ್ಲ ಅಂದ ಹಾಗಾಯ್ತು ಅಲ್ಲವಾ? " ಎಂದು ಸರೋಜ ಹಿಗ್ಗುಕ್ಕೆ ಶುರುಮಾಡಿದಳು.

" ಅಲ್ಲ ಕಣೆ ಸರೋಜ! ಸಾಮಾನೆಲ್ಲಾ ಕಟ್ಟಿದೀಯಾ ಅಂತ ಕೇಳುಕ್ಕೆ ಬಂದೋಳು ಕುದುರೆಬಾಲ, ತಲೆಚೌರಿ, ಈ ಮಾತಾಡ್ತಾ ನಿಂತುಬಿಟ್ಟನಲ್ಲೇ!! ವಾರ್ಡನ್ ಹೇಳಿದರಮ್ಮಾ, ಎಗಡು ಗಂಟೆಗೆ ಸರಿಯಾಗಿ ಬಸ್ ಹೊರಡುತ್ತೆ. ಸಿದ್ಧವಾಗಿಲ್ಲದೆ ಇರೋವರನ್ನು ಇಲ್ಲೇ ಬಿಟ್ಟು ಹೋಗ್ಬಿಡ್ತೀವಿ ಅಂತ " ಆಕೆ ಗೊತ್ತಲ್ಲಾ ಕಡ್ಡಿ ತುಂಡು ಮಾಡಿದಹಾಗೆ ಮಾತಾಡೋದು ಮಾಡೋದೂನೂ ಬೇಗ ಸಿದ್ಧವಾಗಿ ಬಿಡು " ಎಂದು ಹೇಳಿ ಅಃಖ್ತರ್ ತನ್ನ ಕೊಠಡಿಗೆ ಓಡಿಹೋದಳು.

ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ಹತ್ತೂ ತರುಣಿಯರು ಬಸ್ಸಿನಲ್ಲಿ ಕೂತರು. ವಾರ್ಡನ್ನಳು ಇನ್ನೂ ಬಂದಿರಲಿಲ್ಲ. " ನಮ್ಮನ್ನೆಲ್ಲಾ ಅವಸರಪಡಿಸಿ ಬಿಟ್ಟು ಆಕೆ ಆರಾಮವಾಗಿ ಜಡೆಹಾಕುತ್ತಾ ಇಧಾರೇನೋ " ಎಂದು ಕುಹುಕದ ಮಾತುಗಳೂ ಬಸ್ಸಿನಲ್ಲಿ ಪ್ರಾರಂಭವಾಯಿತು. ಆ ಹೊತ್ತಿಗೆ ಕಾಲೇಜಿನ ಮುಖ್ಯೋಪಾಧ್ಯಾಯಿನಿಯೇ ಬಂದಳು. ಮಧ್ಯಾಹ್ನ ಊಟವಾದಾಗಿನಿಂದ ವಾರ್ಡನ್ನರ ಮೈ ಚನ್ನಾ

ಗಿಲ್ಲ, ತಲೆನೋವು, ವಾಂತಿ, ಟೊಂಕಸಿಡಿತ, ತೊಡೆಛಳಕು, ಅಂಗಾಲುರಿ ಹೀಗಾಗಿ ಮಲಗಿಬಿಟ್ಟಿದ್ದಾಳೆ, ಅಂದಮೇಲೆ ಈಗ ಈ ಪ್ರವಾಸವನ್ನೇ ರದ್ದುಮಾಡಬೇಕು. ಅಥವಾ ನಿಮ್ಮಲ್ಲಿ ಯಾರಾದರೂ ಮುಂದಾಳಾಗಿ ನಿಂತುಕೊಂಡು ಪ್ರವಾಸವನ್ನು ಮುಗಿಸುತ್ತೇವೆ ಎಂದು ಧೈರ್ಯಕೊಟ್ಟರೆ, ಆಗಬಹುದು. ಪಶ್ಚಿಮವಾಹಿನಿಯ ಪ್ರವಾಸಿ ಮಂಟಪವನ್ನು ನಿಮಗಾಗಿ ಕಾದಿರಿಸಲಾಗಿದೆ ಆ ಊರಿನ ಹೆಣ್ಣುಮಕ್ಕಳ ಹಾಯ್‌ಸ್ಕೂಲಿನ ಮುಖ್ಯೋಪಾಧ್ಯಾಯಿನಿ, ನಮ್ಮ ಕಾಲೇಜಿನ ಹಳೆ ವಿದ್ಯಾರ್ಥಿ ಆಕೆಯೇ ಎಲ್ಲಾ ಏರ್ಪಾಡನ್ನು ಮಾಡಿದ್ದಾಳೆ. ನಿಮ್ಮಲ್ಲಿ ಮುಂದಾಳಾಗಿ ನಿಂತವರು ಆಕೆಯ ಸಹಾಯ ಪಡೆದು ಪ್ರವಾಸವನ್ನು ಯಶಸ್ವಿಯಾಗಿಸಬಹುದು ಎಂದು ಹೇಳಿದರು.

* * * *

ಸರೋಜಳೇ ಮುಂದಾಳು ಅಂದರು ಹತ್ತು ತರುಣಿಯರು "ನೀವು ಹಾಗೇ ಆಯ್ಕೆಮಾಡ್ತೀರಿ ಅಂತ ನನಗೂ ಅನ್ನಿಸಿತು. ಛಾತಿ ಹುಡುಗಿ ಅವಳು ನಿಭಾಯಿಸಿಕೊಂಡು ಬರ್ತೋಳು" ಎಂದು ಕಾಲೇಜಿನ ಮುಖ್ಯೋಪಾಧ್ಯಾಯಿನಿಯ ಹೇಳಿ ಮಂಗಳವನ್ನು ಕೋರಿ ಪ್ರವಾಸಕ್ಕೆ ಕಳಿಸಿಕೊಟ್ಟರು

ಸಂಜೆ ೫....೫... ೨೦ ಪಶ್ಚಿಮವಾಹಿನಿಯ ಪ್ರವಾಸಿ ಮಂಟಪದ ಹತ್ತಿರ ಬಸ್ಸು ನಿಂತಿತು ಅಲ್ಲಿದ್ದ ಹೆಂಗಸೊಬ್ಬಳು "ಅಮ್ಮಾವ್ರಾ ನಮ್ಮ ಮೇಡಮ್ಮ ನನ್ನ ಇಲ್ಲೇ ಇರು ನೀವೆಲ್ಲ ಬಂದಮ್ಯಾಕೆ ನಿಮ್ಮ ಸಾಮಾನುಸರಂಜಾಮು ಎಲ್ಲಾನಾ ಮಂಟಪದಲ್ಲಿರಿಸಿ ಆಮ್ಯಾಕೆ ನನ್ನಬಂದು ಕರಿ ಅಂತ ಹೇಳಿದ್ರು." ಎಂದು ಹೇಳುತ್ತಾ ಸಾಮಾನು ಹಾಸಿಗೆಗಳನ್ನೆಲ್ಲಾ ಮಂಟಪದ ಒಳ ವಠಾರದಲ್ಲಿರಿಸಿದಳು. ಎಲ್ಲಾರೂ ಸ್ವಲ್ಪ ವಿಶ್ರಾಂತಿ ತೊಗೊಳ್ಳಿ. ಮೇಡಮ್ಮರನ್ನು ಕರೆದು ತರ್ತೀನಿ ಅಂತ ಹೇಳಿ ಹೋದಳು.

ಹತ್ತು ನಿಮಿಷಗಳೂ ಆಗಿಲ್ಲ. ಮೇಡಮ್ಮನವರೇ ಪ್ರತ್ಯಕ್ಷ ಬಂದರು. ಹಿಂದೆಯೇ ಇಬ್ಬರು ತಿಂಡಿ ತೀರ್ಥಗಳನ್ನೆಲ್ಲಾ ತಂದರು. ಆದರದಿಂದ ಸ್ವಾಗತಿಸುತ್ತಾ ಮೇಡಮ್ಮವರೇ ಕೇಸರೀಭಾತು, ವಾಂಗಿಭಾತು ಬೋಂಡ ಕಾಫಿ, ಎಳನೀರು ಎಲ್ಲವನ್ನು ಹುಡುಗಿಯರಿಗೆಲ್ಲಾ ಕೊಟ್ಟು "ರಾತ್ರಿ ಎಂಟು ಗಂಟೆಗೆ ಊಟದ ಏರ್ಪಾಡುಮಾಡಿಸಿದ್ದೀನಿ. ಆ ಹೊತ್ತಿಗೆ ತಿರುಗಿ ಬರ್ತೀನಿ. ಈಗ ನೀವೆಲ್ಲಾ ಬೇಕಾದರೆ ಸ್ನಾನಮಾಡಿ. ಬಿಸಿನೀರು ಸಿದ್ಧವಾಗಿದೆ. ನಿಮ್ಮ ಸಾಮಾನುಗಳನ್ನೆಲ್ಲಾ ಈ ಕೊಠಡಿಗಳಲ್ಲಿರಿಸಿ ಇಲ್ಲಿ ಎಲ್ಲಾ ಬಂದೋಬಸ್ತಾಗಿದೆ. ಕಳ್ಳಕಾಕರ ಭಯವಿಲ್ಲ. ಹಾವು ಚೇಳುಗಳ ಹೆದರಿಕೆ ಇಲ್ಲ." ಎಂದು ಹೇಳಿ ಹೋದರು. ಹುಡುಗಿಯರೆಲ್ಲಾ ಸ್ನಾನಮಾಡಿದರು. ಅವರುಗಳು ಆಗ ಹಾಡಿದ ಗೀತಗಳನ್ನು ಮೆಚ್ಚಿ ಬಚ್ಚಲ ಮನೆಯ ಸೂರಿನಲ್ಲಿದ್ದ ಹಲ್ಲಿಗಳೆಲ್ಲಾ ತಾಳಕ್ಕೆ ಸರಿಯಾಗಿ ಲೊಚ ಲೊಚಗುಟ್ಟಿದುವು.

ಹೊಸ ಸೀರೆಬಟ್ಟೆ ಧರಿಸಿ ಎಲ್ಲರೂ ಮಂಟಪದ ವಠಾರಕ್ಕೆ ಬಂದು ಜಮಖಾನದ ಮೇಲೆ ರವಿವರ್ಮನ ಚಿತ್ರದಲ್ಲಿ ಶಕುಂತಳೆ ಕಾಗದ ಬರೀತಾ ಮಲಗಿರುಲ್ವೆ ಹಾಗೆ ಮಲಕ್ಕೊಂಡು ಹರಟೆ ಶುರುಮಾಡಿದಾಗ, ಇವರುಗಳು ಸೂಸಿಕೊಂಡಿದ್ದ ಸುಗಂಧ ಸೂಸಿನ ತನಳ ಹರಡಿ ಬಲೆಕಟ್ಟಿಕೊಂಡು ಕೂತಿದ್ದ ಜೇಡರುಗಳೆಲ್ಲಾ ತಂತಮ್ಮ ಅಂತಃಪುರಕ್ಕೆ ಹೊರಟುಹೋದುವು.

ಗಂಟೆ ಎಂಟು ಬಡಿಯಿತು ಮೋಡಮ್ಮನವರು ಬಂದರು. ಹುಡುಗಿಯರ ಜತೆಯಲ್ಲೇ ಊಟ ಮಾಡಿದರು. ತಾನು ಕಾಲೇಜಿನಲ್ಲಿದ್ದಾಗ ನಡೆದ ರಸನಿಮಿಷ ಗಳನ್ನೆಲ್ಲಾ ಮೆಲಕುಹಾಕಿ ಎಲ್ಲರನ್ನು ನಗಿಸಿದಳು. ಈ ರಾತ್ರಿ ನಿಮ್ಮ ಜತೇಲಿ ಇಲ್ಲೇ ಮಲಗಿದ್ದು ಈಗಿನ ಕತೆಗಳನ್ನೆಲ್ಲಾ ಕೇಳೋಣ ಅಂತ ಆಸೆ ಆದರೆ ಮನೇಲಿ ಮಗಳಿಗೆ ದಿನವಾಗಿದೆ. ಮನೇಲಿರಲೇಬೇಕು. ನೀವೆಲ್ಲಾ ಏನೂ ತಿಳಿದುಕೊಳ್ಳುಲ್ವಲ್ಲ ನಮ್ಮ ಶಾಲಾ ಜವಾನಿಯರಿಬ್ಬರನ್ನೂ ಇಲ್ಲೇ ಮಲಗಿರಲು ಹೇಳಿದ್ದೀನಿ. ಬೆಳಗ್ಗೆ ಅವರೇ ಬಿಸಿನೀರಿನ ಏರ್ಪಾಡನ್ನು ಮಾಡ್ತಾರೆ, ಎಂದು ಹೇಳಿ ಮನೆಗೆ ಹೊರಟು ಹೋದಳು.

ಮಾರನೆ ಬೆಳಗ್ಗೆ ಮೋಡಮ್ಮನವರು ಬರಲಿಲ್ಲ ಒಂಭತ್ತಾಗಿತ್ತು. ಈಗತಾನೇ ಅವರ ಮಗಳು ಹೆತ್ತಳು ಆದ್ದರಿಂದ ಆಕೆ ಬರಲಿಕ್ಕೆ ಆಗಲಿಲ್ಲ ನಿಮ್ಮನ್ನೆಲ್ಲಾ ಶ್ರೀರಂಗ ಪಟ್ಟಣಕ್ಕೆ ಕರೆದುಕೊಂಡು ಹೋಗಿ ಎಲ್ಲಾ ತೋರಿಸಿಕೊಂಡು ಸಂಜೆಮುಂದೆ ರಂಗ ನಾಥಸ್ವಾಮಿ ದೇವಾಲಯಕ್ಕೆ ಹೋಗಿ ಪೂಜೆ ಮುಗಿಸಿಕೊಂಡು, ಇಲ್ಲಿಗೇ ಊಟಕ್ಕೆ ಕರಕೊಂಡು ಬಾ ಎಂದು ನನ್ನನ್ನು ಕಳಿಸಿದರು ಮೋಡಮ್ಮನವರು ಎಂದು ಶಾಲೆಯ ಇನ್ನೊಬ್ಬ ಹಿರಿಯ ಉಪಾಧ್ಯಾಯಿನಿ ಬಂದು ಹೇಳಿದಳು.

ಶ್ರೀರಂಗಪಟ್ಟಣದಲ್ಲಿ ಹೈದರಾಲಿಯ ಜನಾನಾ ಎಲ್ಲಿತ್ತು, ಟೀಪೂಸುಲ್ತಾನನ ಜನಾನ ಎಲ್ಲಿತ್ತು, ನದೀತೀರದಲ್ಲಿ ಘೋಷಾ ಏರ್ಪಾಡನ್ನು ಹೇಗೆ ಮಾಡಿದ್ದರು ಬೆಳದಿಂಗಳಿನಲ್ಲಿ ಲತಾಗೃಹದ ನೆರಳಿನಲ್ಲಿ ಕುಳಿತರೆ ಯಾವರೀತಿ ಮೋಜಿರುತ್ತೆ ಎಲ್ಲ ವನ್ನು ಆ ಉಪಾಧ್ಯಾಯಿನಿ ಎಷ್ಟು ರಸವತ್ತಾಗಿ ಬಣ್ಣಿಸಿ ವಿವರಿಸಿದಳು ಅಂತ.

ರಾತ್ರಿ ಎಂಟುಗಂಟೆಗೆ ಎಲ್ಲರೂ ಹಿಂತಿರುಗಿದಾಗ, ಪ್ರವಾಸಿ ಮಂಟಪದಲ್ಲಿ ಊಟಕ್ಕೆ ಸಿದ್ಧತೆಯಾಗಿತ್ತು. "ನೀವೆಲ್ಲಾ ಊಟಮಾಡಿ ಮಲಗಿಕೊಳ್ಳಿ ದಣಿದಿದ್ದೀರಿ. ನಾನು ರಾತ್ರಿ ಊಟಮಾಡುಲ್ಲ. ಮನೆಗೆ ಹೋಗ್ತೀನಿ ಬೆಳಗ್ಗೆ ಮೋಡಮ್ಮನವರೇ ಬಂದು ನಿಮ್ಮನೆಲ್ಲಾ ಭೇಟಿಯಾಗಿ ಬೀಳ್ಕೊಡ್ತಾರೆ. ಹೋಗಿ ಬರಲೇ" ಎಂದು ಹೇಳಿ ಹೊರಟು ಹೋದಳು.

ಊಟವಾದಮೇಲೆ ಎಲ್ಲರೂ ಮಂಟಪದ ಹಜಾರದಲ್ಲಿ ಬಿದ್ದುಗೊಂಡಿದ್ದರು, ಆ ಮಾತು ಈಮಾತು ಆಡ್ತಾ.

" ನನಗನ್ನಿಸುತ್ತಮ್ಮ ನಮ್ಮ ಜತೆಗೆ ಬಂದಿದ್ದಳಲ್ಲಾ ಆಕೆ ಹಿಂದಿನ ಯಾವುದೋ ಜನ್ಮದಲ್ಲಿ ಟೀಪೂವಿನ ಜನಾನಾದಲ್ಲಿ ಮುಖ್ಯ ಪಾತ್ರ ವಹಿಸಿದ್ದಳು ಅಂತ?" ಎಂದು ಒಬ್ಬಾಕೆ ಬಿಸು ಸುಯ್ಯುತ್ತಾ ಹೇಳಿದಳು.

" ಹಗಲಾಗಿದ್ದರೂಕೂಡ ಆಕೆಯ ಮಾತು ಕೇಳ್ತಾ ನದಿಯ ದಡದಲ್ಲಿ ಕೂತಾಗ ಬೆಳದಿಂಗಳು ನನ್ನೊಳಗೇ ಬಿದ್ದ ಹಾಗಾಯ್ತು" ಅಂತ ಇನ್ನೊಬ್ಬಳು ಪಲುಕಿದಳು

" ಓಹೋಹೋ! ಅಂಗಾಕೆ ಬೆಳದಿಂಗಳ್ ಬಿಸುಲಾಗಿ ತೋರ್ಪುದು" ಎಂದ ಪಲುಕಿದಳು ಮತ್ತೊಬ್ಬಳು.

" ಏನ್ರೀ! ಹೀಗೆಲ್ಲಾ ಅಂತೀರಿ, ನವಾಬರ ಕಾಲದಲ್ಲಿ ಸ್ರೀರಂಗಪಟ್ಟಣ ಅಂತ ಶರೀತಾ ಇದ್ದರಾ" ಎಂದಳು ಇನ್ನೊಬ್ಬಳು.

" ನವಾಬರ ಜನಾನಾದಲಿ ಕಟ್ಟಳೆ ನಿಯಮ, ಸ್ವಾತಂತ್ರ್ಯ ಸೊಬಗು ಇವೆಲ್ಲಾ ಎಷ್ಟಿತ್ತು ಅಂತ ನಿಮಗೇನು ತಿಳಿಯೋದು?" ಎಂದಳು ಅಃಖ್ತರ್.

" ಹತ್ತೊ ಹೂವು ಮುಡಿಯೋ ತುರುಬಿನಮೇಲೆ ಕೂರಬೇಕೇನೇ ನೀನು" ಎಂದು ಅಃಖ್ತರಳನ್ನು ರೇಗಿಸಿದಳು ಮಗುದೊಬ್ಬಳು ಮುಗುದೆ.

" ಅಃಖ್ತರಳನ್ನೇಕೆ ಛುಡಾಯಿಸ್ತೀಯೇ!, ನನಗೂ ಈಗ ಯಾಕೋ ಹ್ಯಾಗ್ಯಾಗೊ ಆಗ್ತಿದೆ." ಅಂದಳು ಸರೋಜ.

" ಹ್ಯಾಗೆ ಹ್ಯಾಗೋ, ಕಾಣೆ! ನನಗೆ ಸುಸ್ತು ಬಡಿದು ಹೋಗಿದೆ" ಎಂದಳು ಒಬ್ಬಳು.

" ಇದೆಲ್ಲಾ ಓದುಬರಹ ಯಾಕೋಮ್ಮ! ಸುಖವಾಗಿ ನಮ್ಮ ಅತಿಥೇಯ ಉಪಾಧ್ಯಾಯಿನಿಯ ಮಗಳ ಹಾಗೆ ಇರಬಾರದಾಗಿತ್ತೆ ನಾವು" ಎಂದಳು ಇನ್ನೊಬ್ಬಳು.

" ನಮಗೆ ಸರಿಯಾದ ವರ ಎಲ್ಲಿ ಸಿಗಬೇಕು" ಎಂದಳು ಮೂರನೆಯವಳು " ಸರಿಯಾದ್ದೇನು ಬಂತೀ? ಬೆಸವಾದ್ದೇನು? ಈಗ ಯಾವ ಪಿಶಾಚಿ ಸಿಕ್ಕಿದರೂ ಸರಿ ನಾನು ಮದುವೆಯಾಗಿ ಬಿಡ್ತೀನಮ್ಮಾ" ಎಂದು ಕೊಠಡಿಯ ಹೊಸಿಲಮೇಲೆ ಮಲಗಲು ಹೋಗುವಮುನ್ನ ಆಕಳಿಸುತ್ತಾ ನಿಂತ ಸರೋಜ ಹೇಳಿದಳು.

ಹೇಳಿದ ಒಂದೇ ಕ್ಷಣದಲ್ಲಿ ಹೊಸಿಲಿನಮೇಲೆ ನಿಂತಿದ್ದೋಳು ಹಾಗೆಯೇ ಮಾಯವಾದಳು.

" ಎಲ್ಲಿ ಮಾಯವಾದೆಯೇ" ಅಃಖ್ತರ್ ನಿಮಿರಿನಿಂತು ಕೊಠಡಿ ಬಳಿಗೆ ಓಡುತ್ತಾ ಕೇಳಿದಳು. ಕೊಠಡಿ ಖಾಲಿಯಾಗಿತ್ತು.

ಉಳಿದವರೆಲ್ಲಾ ದಡಬಡಗುಡುತ್ತಾ ಎದ್ದರು. ಒಬ್ಬರನೊಬ್ಬರು ವಿಚಾರಿಸಿದರು ಸರೋಜ ಮಾಯವಾದ್ದನ್ನು ಆರೇಖ ಜನ ಕಂಡಿರಲಿಲ್ಲ. ಕೇಳಿ ತಿಳಿದುಕೊಂಡರು

ಇದೇನಮ್ಮ ಹೀಗಾಯ್ತು ಅಂತ ಜವಾನಿಯನ್ನು ಎಬ್ಬಿಸಿದರು. ಅವಳಿಗೆ ಎಲ್ಲಾ ವಿಷಯ ಹೇಳುತ್ತಲೂ ಅವಳು ನಿಧಾನವಾಗಿ ಎಲ್ಲಿಗೆ ಮಾಯವಾಗಿ ಹೋಗ್ತಾರಮ್ಮಾ ಕೊಠಡಿಯ ಪಕ್ಕದಲ್ಲಿ ಬಿಸಿಲ ಮಚ್ಚಿಗೆ ಹೋಗುಕ್ಕೆ ಕಲ್ಲು ಮೆಟ್ಟಲುಗಳಿವೆ. ಅಲ್ಲಿಗೆ ಹತ್ತಿ ಹೋಗಿರಬಹುದು. ಹೋಗಿ ಹುಡುಕೋಣ ಇರಿ. ಲಾಂದ್ರ ದೊಡ್ಡದು ಮಾಡಿ ಎಂದು ಹೇಳಿದಳು. ಲಾಂದ್ರ ಹಿಡಿದುಕೊಂಡು ತಾನೇ ಮುಂದೆ ನಡೆದಳು ಹಜಾರದ ಪಕ್ಕದಲ್ಲಿದ್ದ ಕೊಠಡಿಯ ಬಾಗಿಲ ಹಿಂದೆಯೇ ಮೆಟ್ಟಲುಗಳು ಕಾಣಿಸಿದುವು ಮೆಲ್ಲಮೆಲ್ಲಗೆ ಹತ್ತಿ ಹೋದಾಗ. ಬಿಸಿಲು ಮಚ್ಚು ಕಾಣಿಸಿತು ಅ ದ ರ ಮೇ ಲೆ ಹೋದರು. ಕರಟದರಾಶಿ ಒಂದು ಕಡೆ. ಜುಂಗಿನರಾಶಿ ಇನ್ನೊಂದು ಕಡೆ. ಎರಡರ ಮಧ್ಯೆ ಸರೋಜ ನಿಂತಿದ್ದಳು.

" ಇಲ್ಲಿಗೆ ಯಾವ ಮಾಯದಲ್ಲಿ ಬಂದೆ ನೀನು " ನಿನಗೆ ಹೇಗೆ ಗೊತ್ತಿತ್ತು ಈ ಮೆಟ್ಟಲಿರೋದು" ಎಂದು ಎಲ್ಲರೂ ಒಟ್ಟಿಗೇ ಕೇಳಿದರು.

" ಕೆಳಗಿಳಿದು ಹೋಗೋಣ ಆ ಮೇಲೆ ಹೇಳ್ತೀನಿ" ಎಂದಳು ಸರೋಜ.

ಎಲ್ಲರೂ ಕೆಳಗಿಳಿದು ಬಂದಾಗ ಹಜಾರದಲ್ಲಿ ಕೂತಾಗ ಕೊಠಡಿ ಬಾಗಿಲುಗಳನ್ನೆಲ್ಲಾ ಹಾಕಿಸಿ, ಸರೋಜ ಹೇಳಿದಳು ಎಲ್ಲರೂ ಇಲ್ಲೇ ಮಲಗೋಣ ಮಲಗಿದಾಗ ನಡೆದಿದ್ದನ್ನು ಹೇಳ್ತೀನಿ ಎಂದಳು. ಹೇಳುವ ದನಿ ಗಂಭೀರವಾಗಿತ್ತು. ಜವಾನಿಯು ಆಗಲೇ ಕೈ ಸಾಲೆಯಲ್ಲಿ ಗೊರಕೆ ಹುಯ್ತಿದ್ದಳು.

ಎಲ್ಲರೂ ಹಾಗೆಯೇ ಹಾಸಿಕೊಂಡು ಮಲಗಿದರು. ಆಗ ಸರೋಜ ಹೇಳಿದಳು. "ಹೊಸಿಲಮೇಲೆ ನಿಂತಿದ್ದಾಗ ಯಾವ ಪಿಶಾಚಿಯನ್ನಾದರೂ ಮದುವೆಯಾಗ್ತೀನಿ ಅಂದಾಗ ಯಾರೋ ನನ್ನನ್ನ ಎತ್ತಿಕೊಂಡು ಬಾಗಿಲ ಹಿಂದಕ್ಕೆ ಓಡಿ ಹೋಗಿ ದಬದಬ ಹತ್ತಿದರು. ಬಿಸಿಲು ಮಚ್ಚಿನಮೇಲೆ ಕಾಣದೆ ಇದ್ದ ಅದು ನೀನು ಹೇಳಿದ್ದು ದಿಟಾನಾ" ಎಂದಿತು. ನನ್ನ ಜೋರು ನೋಡಿದ್ದೀರಲ್ಲಾ ' ಹ್ಞೂ ' ಎಂದೆ. " ಹಾಗಾದರೆ ನನ್ನೇ ಮದುವೆಯಾಗ್ತೀಯಾ, ನಾನೇ ಪಿಶಾಚಿ ಎಂದಿತು "ಸೈ" ಎಂದೆ ಪಿಶಾಚೀನ ಮದುವೆಯಾದರೆ ಅದನ್ನು ಕಣ್ಣಾರೆ ನೋಡಬಹುದಲ್ಲ ಅಂತ ಆಸೆಬೇರೆ. ಓಲಗದ ಶಬ್ದ ಆಯಿತು ಯಾರೋ ಶೋಭಾನೆ ಹಾಡಿದರು. ಅಷ್ಟಪುತ್ರಾ ಭವೇತ್ ಅಂದ್ಹಾಗಾಯ್ತು. ಇನ್ನೂ ಯಾರೂ ಕಂಡಿರಲಿಲ್ಲ ಅಷ್ಟರಲ್ಲೇ ನೀವೆಲ್ಲಾ ಲಾಂದ್ರ ಹಿಡಕೊಂಡು ಬಂದ್ಬಿಟ್ರಿ" ಎಂದಳು ಸರೋಜ.

" ಎಲ್ಲಾ ನಿನ್ನ ಕಟ್ಟು ಕಥೆ" ಎಂದಳು ಅಃಖ್ತುರ್.

“ಹಾಗಾದರೆ ಈ ತಾಳೀ ಕರೀಮಣೀನ ಯಾರು ಕಟ್ಟಿದ್ದಮ್ಮ. ಇಲ್ಲಿಗೆ ಬಂದಾಗ ನನಗೆ ಇನ್ನೂ ಮದುವೆ ಆಗಿತ್ತಿಲ್ಲ ಅಂತ ಗೊತ್ತಲ್ಲಾ” ಎಂದಳು ಸರೋಜ.

“ಎಲ್ಲರೂ ಎದ್ದು ಕೂತು ಲಾಂದ್ರದ ಬೆಳಕನ್ನ ಬೆಳದಿಂಗಳ ಹಾಗಿದ್ದ ಸರೋಜನ ಕತ್ತಿನಮೇಲೆ ಹಾಯಿಸಿದರು. ದಿವನಾದ ಕರೀಮಣಿಸರ ತಾಳಿಜೋಡಿ. ಮಧ್ಯೆಮಧ್ಯೆ ಅರ್ಧ ಚಂದ್ರಾಕೃತಿಯ ಚಿನ್ನದ ಗುಂಡುಗಳು.

“ಲೇ! ಸರು! ಈ ತಾಳಿ ಕಟ್ಟಿದ ಪಿಶಾಚಿ ನಮ್ಮೋರದೇ ಇರಬೇಕು ಕಣೆ” ಎಂದು ಉದ್ಗಾರ ತೆಗೆದಳು ಅಃಖ್ತರ್.

“ಸರಿ! ಈ ಸರೋಜನ ಆಟ ಕಂಡಿದ್ದೀರಲ್ಲಾ ಬೆಂಗಳೂರಿಂದ ಕೈ ಚೀಲಕ್ಕೆ ಇದನ್ನೂ ಹಾಕ್ಕೊಂಡು ಬಂದಿದ್ದಳು ಅಂತ ಕಾಣುತ್ತೆ. ಬಲು ಖಿಲಾಡಿ ಕಣೆ!” ಎಂದು ಹೇಳುತ್ತಾ ಎಲ್ಲರೂ ಮಲಗಿಕೊಂಡರು.

* * * *

ಬೆಳಗ್ಗೆ ಮೇಡಮ್ಮನವರು ಬಂದು ಬೀಳ್ಕೊಡುವಾಗ “ನಿಮಗೆ ಹೇಳೋದು ಮರ್ತಿದ್ದೆ. ಈ ಮಂಟಪದಲ್ಲಿ ಪಿಶಾಚಿಗಳ ಕಾಟ ಅಂತ ಜನ ಹೇಳ್ತಾರೆ. ಆದರೆ ಅದರಲ್ಲಿ ನಂಬಿಕೆ ನನಗಿಲ್ಲ. ನಿಮಗೇನೂ ತ್ರಾಸು ಮಾಡಲಿಲ್ಲವಲ್ಲ” ಎಂದು ಹೇಳಿದರು.

ಒಬ್ಬರ ಮುಖ ಒಬ್ಬರು ನೋಡಿಕೊಂಡರು.

* * * *

ಈಗ ಕನ್ಯಾವಸ್ಥೆಯಲ್ಲಿರೋ ಸರೋಜಳಿಗೆ ಸಮಸ್ಯೆ ಮುಂದೆ ನಿಂತಿದೆ. ಒಂದು ಸರ್ತಿ ಮದುವೆಯಾದಮೇಲೆ, ಗಂಡ ನನ್ನ ಕಾಣದೆ ಇದ್ದರೂ ಈಗ ವಿಧವೆಯೋ ಮುತ್ತೈದೆಯೋ ಅಥವಾ ಇನ್ನೊಂದು ಮದುವೆ ಮಾಡ್ಕೊಂಡು ಈ ಹೊಸ ಪಿಶಾಚಿ ಯಿಂದ ಹಳೇದನ್ನು ಕೊಕ್ಕುಕೊಡಬಹುದೇ ? ಎಂದು.

—ಕುಮಾರ್

ಇತ್ತೀಂದೀಚೆಗೆ ಬಂದಿರುವ ಪ್ಲಾಸ್ಟಿಕ್ ಗಾಂಧಿ ಟೋಪಿಗಳನ್ನು ಚುನಾವಣೆ ಯಲ್ಲಿ ಸೋತ ಅಭ್ಯರ್ಥಿಗಳಿಗೆ ಪುಕಟ್ಟು ಹಂಚುತ್ತಾರೆಂಬುದು ಶುದ್ಧ ಸುಳ್ಳಂತೆ.

—ಸೋತವರಿಗೆ ಆ ಟೋಪಿ ಯಾಕೆ? ಅಂತೀನಿ.

* * * *

ಕೊರವೇಶ್ವರ ವಚನಗಳು

(ಚುನಾವಣೆಯ ಅನಂತರ)

ನೀನೊಲಿದರೆ ಕೊರಡು ಕೊನರುವುದಯ್ಯ, ನೀನೊಲಿದರೆ ಸೀಟು ಪರ್ಮಿಟು ಗಳಿಗೆ ಭಯವಿಲ್ಲವಯ್ಯ, ನೀನೊಲಿದರೆ ಕೇಸುಗೀಸುಗಳೆಲ್ಲ ಮಾಯವಯ್ಯ, ನೀನೊಲಿದರೆ ಸಕಲ ಪುರುಷಾರ್ಥಗಳು ಎನ್ನವಯ್ಯ; ಒಮ್ಮೆಯೆನಗೆ ಎಮ್ಮೆಲೆಯ ವರವ ದಯಪಾಲಿಸಯ್ಯ-ಇಂತು ಮೊರೆಯಿಡುತ ಆಸಾಮಿಯೊಬ್ಬ ಆಂಜನೇಯನ ಮುಂದೆ ಬಂದು ಶನಿವಾರ ಅಡ್ಡಬಿದ್ದುದ ಕಂಡ ನಮ್ಮ ಕೊರವೇಶ್ವರ.

ಕರಿ ಅಂಜುವದು ಅಂಕುಶಕ್ಕಯ್ಯ. ಒಮ್ಮೆ ಮಂತ್ರಿಯಾದವನು ಅಂಜುವದು ಮುಂಬರುವ ಪಾರ್ಟಿ ನಾಯಕನ ಚುನಾವಣೆಗಯ್ಯ; ಒಮ್ಮೆ ಎಮ್ಮೆಲೆಯಾದಾತ ಅಂಜುವುದು ಮುಂಬರುವ ಮಹಾ ಚುನಾವಣೆಗಯ್ಯ; ಈ ಭಯವನುಳಿದರೆ ಒಮ್ಮೆ ಸೀಟು ಗಿಟ್ಟಿಸಿದವನಿಗೆ ಬೇರೆ ಭಯವಿಲ್ಲವಯ್ಯ ಎಂಬ ನಮ್ಮ ಕೊರವೇಶ್ವರ.

ಸಚಿವ ಸಂಪುಟ ಸೇರಿಕೊಂಡಿದ್ದರೂ, ಪಾರ್ಟಿ ಸಲಹನೇ ಎನಿಸಿದರೂ ಸೋಲು ತಪ್ಪದಯ್ಯ. ಭಾರಿ ಆಸೆಗಳ ಸಾಕಿದೊಡೇನು, ವೋಟುಗಳಿಸಿ ಸೀಟು ದಕ್ಕಿಸಿಕೊಳ್ಳದಿದ್ದರೆ 'ಪೀಟಿಕ್ ಷೊ' ಎಂಬ ಡಿಮಾಕ್ರಸಿಗೆ ಧಿಃಕ್ಕಾರವಿರಲಿ ಎಂಬ ಮಾಜಿಯ ಕಂಡ ನಮ್ಮ ಕೊರವೇಶ್ವರ.

ಸೋತ ಸಲಗಗಳೆ, ಚುನಾವಣೆಯ ಕಂತೆಯ ಬಿಚ್ಚಲುಬೇಡಿ. ಹೊಲಸು ತುಂಬಿದೆಯದರಲ್ಲಿ ಮನದಲ್ಲಿ ಕಹಿ ತುಂಬಿಕೊಂಡಿರುವಾಗ ಒಂದನಾಡ ಹೋಗಿ ಒಂಬತ್ತನಾಡಿ ನಗೆಪಾಟಲು ಮಾಡಿಕೊಳ್ಳಬೇಡಿರೋ ಎಂಬ ನಮ್ಮ ಕೊರವೇಶ್ವರ.

ತನ್ನ ವಿಚಾರಿಸಲೊಲ್ಲದು, ಉಳಿದವರ ವಿಚಾರಿಸ ಹೋಹುದೀ ಮನವು. ತಾನು ವೋಟುಗಳಿಸಿದ ಬಗೆಯಗಳೆವುದನುಳಿದು ಇತರರೆಂತು ಗಳಿಸಿದರೆಂದು ಹಳಿದು ಬಣ್ಣಿಪುದರ ಮುಸುಡಿಗೆ ಕನ್ನಡಿ ಹಿಡಿಯಿರೋ ಎಂಬ ನಮ್ಮ ಕೊರವೇಶ್ವರ.

ಕೊಂಬೆಯ ಮೇಲಣ ಮರ್ಕಟದಂತೆ ಲಂಘಿಸುತ್ತಿರುವುದೂ ಒಂದು ಮೋಜಿರಬಹುದು. ಮಾಸ್ತರಿಕೆ ಅಂಗಡಿ, ಸೊಸೈಟಿ, ಪಂಚಾಯ್ತಿ ಅಧ್ಯಕ್ಷ, ಮುನ್ಸಿಪಾಲ್ಟಿ ಮೆಂಬ್ರು, ಚೇರ್‌ಮೇನು, ಎಮ್ಮೆಲೆ, ಮಂತ್ರಿಯೆಂದೆಲ್ಲ ಹುದ್ದೆಯಿಂದ ಹುದ್ದೆಗೆ

ಪದವಿಯಿಂದ ಪದವಿಗೆ ಲಂಘಿಸಿ ಲಾಂಗೂಲವ ಚಿಮ್ಮಿಸಿ ಕೊನೆಗೊಮ್ಮೆ ಹವಣತಪ್ಪಿ ನೆಲಕ್ಕುರುಳಿ ಮತ್ತೆ ಮರದ ಬುಡಕ್ಕೈದು ಮೇಲೆ ನೋಡಿ ಕಣ್‌ಕಣ್ ಬಿಡುತ್ತ ನಿಂತ ಮರ್ಕಟವ ಕಂಡು ಮಾತ್ರ ಕನಿಕರಿಸುವ ನಮ್ಮ ಕೊರವೇಶ್ವರ.

ಬ್ಯಾಂಕ್ ಎಕೌಂಟು ಭರ್ಜರಿಯಾಗಿದ್ದರೆ ಮಾತ್ರ ನಿಲ್ಲಬಹುದಯ್ಯ, ಅವರಿವರು. ಪುಸಲಾಯಿಸಿದರೆಂದು ನಿಲ್ಲಬಾರದಯ್ಯ. ಎತ್ತಿ ನಿಲ್ಲಿಸಿದವರ ಕಾಲ್ಪಿಡಿದೆಳೆದರೆ, ಎದುರಾಳಿಯ ಪರ್ಸಿಗೆ ಮನಸೋತು ಕಾಲಕ್ಕೆ ಕೈಕೊಟ್ಟರೆ, ಮನೆಯ ಮಕ್ಕಳೆ ಮೂರನೆಯವರಿಗಾಗಿ ವೋಟು ವೋಟೆಂದು ಅಲೆದರೆ ಯಾರ ದೂರಿ ಫಲವೇನೆಂದು ಅಲ್ಲೊಬ್ಬ ಇಲ್ಲೊಬ್ಬ ಇಡುಗಂಟಿಗೆ ಎರವಾತ ಹಲಬುವುದ ಕಂಡ ನಮ್ಮ ಕೊರವೇಶ್ವರ.


ಗೆದ್ದೆ ಗೆಲ್ಲುವೆಯೆಂದು ಪೂಸಿಮಾಡಿಯುಬ್ಬಿಸಿ ಎನ್ನ ಸೋಲಿನ ಶೂಲದಲಿಕ್ಕಿದರಯ್ಯ ನಿಮ್ಮ ಉಬ್ಬಿಸಾಟಗಳೆನಗೆ ಕೈಕೊಟ್ಟವಲ್ಲಿ, ನಿಮ್ಮ ಹುಚ್ಚಾಟಗಳೆನ್ನ ಇಡುಗಂಟ ಹೊಡೆದುಕೊಂಡು ಹೋದವಯ್ಯ, ಅಯ್ಯೋ ಕೆಟ್ಟೆನು ಸೈರಿಸಲಾರೆನು ವಡೆಸರವನೊಪ್ಪಿಸಿಕೊಂಡ ಆಂಜನೇಯನೆ ನೀನೊಳ್ಳೆತನಾದರೆ ಕಳಕೊಂಡ ಗಂಟನಾದರೂ ಪ್ರಾಕ್ಟೀಸಿನಲಿ ಕೂಡಿಸಿಕೊಡಯ್ಯ ಎಂದು ಆಸಾಮಿ ಮೊರೆಯಿಡುವುದ ಕಂಡ ನಮ್ಮ ಕೊರವೇಶ್ವರ.

ನಾವೊಂದು ನೆನೆದರೆ ದೈವ ತಾನೊಂದು ನೆನೆವುದು. ನಾನು ಕೇವಲ ಅಸೆಂಬ್ಲಿ ಸೀಟಿಗೆಳಸಿದರೆ ದೈವ ಸಚಿವ ಸಂಪುಟದಲ್ಲೆ ಸೀಟೊದಗಿಸುವುದು ಎಮ್ಮೆಲೆಯಾಗಿ ಊರಲ್ಲೆ ಒಳ್ಳೆ ಬಾಡಿಗೆ ಮನೆ ಗಳಿಸಿಯೇನೆಂದುಕೊಂಡಿದ್ದರೆ ದೈವ ರಾಜಧಾನಿಯಲ್ಲಿ ಬಿಟ್ಟಿ ಮನೆಯೊದಗಿಸುವುದಯ್ಯ ಹಳೇ ಕಾರೊಂದ ಕೊಂಡು ಊರ ರೋಡುಗಳಲ್ಲಿ ಮೆರೆವೆನೆಂದು ಕೊಂಡಿದ್ದರೆ ಸೆಳೆಮಿಂಚಿನಂತೆ ಸುಂಯೆಂದು ಸಾಗುವ ಈ ಹೊಸ ಕಾರು ಬಂದಿದೆಯಯ್ಯ, ಎಮ್ಮೆಲೆಯಾಗಿ ಡಾಕ್ಟರೋ ಇಂಜಿನಿಯರೊ ಅಳಿಯನಾಗುವುದ ಕಂಡೇನೆಂದು ಹಾರೈಸಿಕೊಂಡಿದ್ದರೆ IAS ವರಗಳಿಗೆ ಗಾಳ ಹಾಕಿದರೂ ಹಾಕಬಹುದೆಂಬ ದಿನಬಂತಯ್ಯ ಈ ದೈವದ ಪರಿಯ ಕಾಣೆರಯ್ಯ ಎಂದು ಬಾಯಲ್ಲಿ ಬೆಳ್ಳಿ ಚಮಚವಿಟ್ಟು ಹುಟ್ಟಿದವನೊಬ್ಬ ಹಿರಿಹಿರಿ ಹಿಗ್ಗುವುದ ಕಂಡ ನಮ್ಮ ಕೊರವೇಶ್ವರ.

ಎನ್ನ ನಡೆಯೊಂದು ಪರಿ, ನುಡಿಯೊಂದು ಪರಿ, ಮನದೊಳೆನ್ನೊಂದು ಪರಿ, ಚಾರಿತ್ರ್ಯ ಶುದ್ಧವಲ್ಲವೆಂಬಿರೇನಯ್ಯ? ಎಲೆಕ್ಷನ್ ಕಾಲೇಜಲಿ ಗ್ರಾಜುಯೇಟೆನಿಸಲು ಸಿಲೆಬಸ್ ಕರಿಕುಲಂ ಬೇರಿಲ್ಲ ಕಾಣಿರಯ್ಯ ಎಂದು ಪುಢಾರಿಯೊಬ್ಬ ಮೀಸೆ ಕುಣಿಸುವುದ ಕಂಡು ನಸುನಕ್ಕ ನಮ್ಮ ಕೊರವೇಶ್ವರ.

ಬೆದಕದಿರಿ ಬೆದಕದಿರಿ! ಬೆದಕಿದರೆ ಹುರುಳಿಲ್ಲ. ಗೆದ್ದವರು ಎಂತು ವೋಟು ಗಳಿಸಿದರು, ಸೋತವರು ವೋಟಿಗೆಂತು ಎರವಾದರೂ ಎಂದೆಲ್ಲ ಬೆದಕುತ್ತ ಕುಳಿತರೆ ಸಮಾಜದ ಕೊಳಕೆಲ್ಲ ರಾಡಿ ರಾಡಿ ಹೊಲಸೆಲ್ಲ ತಳದೊಳಿರಲಿ. ಮೇಲೆ ಕೊಂಚ ವಾದರೂ ತಿಳಿನೀರಿರಲಿ ಅಂತೋ ಇಂತೋ ಎಂತೋ ವೋಟುಗಳಿಸಿದವರು ವರ್ಷಗಳೈದು ಅರಸೊತ್ತಿಗೆ ನಡೆಸುವುದಂತೂ ಖಚಿತವಾದ ಮೇಲೆ ಬೆದಕಿ ಫಲ ವೇನೆಂದು ಅವರಿವರು ತಲೆಗೆ ಕೈಕೊಟ್ಟು ಕುಳಿತುದ ಕಂಡ ನಮ್ಮ ಕೊರವೇಶ್ವರ.

—ರಾಮಿ.



" ನಾನು ಒಪ್ಕೋತೀನಿ, ನಾನು ಮಂತ್ರಿ ಆಗಿದ್ದಾಗ ಎಷ್ಟೊ ತಪ್ಪು ಮಾಡಿದೀನಿ ಅದನ್ನ ಜನಗಳತ್ರ ಹೇಳ್ದೆ ಓಟು ಕೊಟ್ರು"

ಕೋತಿ ಆಟ

ಉಯಿಲು ಬರೆದಿಟ್ಟ, ಹೊಸ ಉಯಿಲನ್ನು. ಸೇಡನ್ನೆಲ್ಲಾ ತೀರಿಸಿಕೊಂಡು ಬರೆದ ಉಯಿಲನ್ನು ರಾತ್ರಿಯೆಲ್ಲಾ ನಿದ್ದೆಗೆಟ್ಟು, ಏನೆಲ್ಲಾ ನೆನೆಸಿಕೊಂಡು ಹೊಸ ಉಯಿಲು ಬರೆದಿಟ್ಟಾಗ, ಬೆಳಗಿನ ಝಾಮು ಮೂರು ತಾಸಾಗಿತ್ತು. ಕಣ್ಣು ಉರಿಯುತ್ತಿತ್ತು.

ನಿದ್ರೆ ಸರಿಯಾಗಿ ಬರಲಿಲ್ಲ. ಆರು ಗಂಟೆಗೇ ಎದ್ದ. ಮುಖ ತೊಳೆದು ಕೊಂಡು ಬೀದಿಗೆ ಹೋಗಿ ಅಡ್ಡಾಡಿ ಬರೋಣೆಂದು ಹೊರಟಿದ್ದ ಕಾಳಿಂಗರಾಯ— ಕಾಫೀನೂ ಕುಡಿಯದೆ.

ದಾರಿಯಂಚಿನಲ್ಲಿ ಕೋತಿ ಆಡಿಸುವವನೊಬ್ಬ, ಕೋತಿ ಆಡಿಸುತ್ತಿದ್ದ. ಹುಡುಗರು, ಹಳ್ಳಿಯವರು, ಸುಮಾರು ಜನ ಕೋತಿ ಆಟ ನೋಡುತ್ತಾ ಸುತ್ತುಗಟ್ಟಿ ನಿಂತಿದ್ದರು. ಕಾಳಿಂಗರಾಯನ ಮನಸ್ಸೆಲ್ಲಾ ಚಲ್ಲಾಪಿಲ್ಲಿಯಾಗಿತ್ತು. ಮದುವೇ ಮನೇಲಿ ಸಾಮಾನು ಬಿದ್ದಿರೋ ಹಾಗೆ, ಅವನ ಮನಸ್ಸಿನ ತುಂಬಾ, ಹಳೆಯ ಕಹಿ ಸಿಹಿ ನೆನಪುಗಳೆಲ್ಲಾ ಅಡ್ಡಾದಿಡ್ಡಿ ಬಿದ್ದಿದ್ದುವು. ಯಾವುದೋ ನೆನಸಿಕೊಂಡರೆ ಇನ್ನೇತರ ನೆನಪೋ ಎದ್ದು ಬರುತ್ತಿತ್ತು. ಯಾವುದೂ ಸ್ಥಿಮಿತಕ್ಕೆ ಬಾರದು. ಹಾಗಾಗಿ ವಯಸ್ಸಾಗಿದ್ದರೂ, ಶ್ರೀಮಂತನಾಗಿದ್ದರೂ, ಸಮಾಜದಲ್ಲಿ ದೊಡ್ಡವನೆನಿಸಿಕೊಂಡಿದ್ದರೂ ಕೂಡ ಎಲ್ಲವನ್ನೂ ಮರೆತು ಕಾಳಿಂಗರಾಯ ಕೋತಿ ಆಟ ನೋಡಲು ನಿಂತ.

ಕೋತಿ ಆಡಿಸುವವ ಅದರ ಕೈಲಿ ಗಂಟೊಂದನ್ನು ಕೊಟ್ಟ. "ಅತ್ತೆ ಮನೆಗೆ ಹೋಗುವಾಗ ಹೇಗೆ ಹೋಗ್ತಿ" ಎಂದು ಕೇಳಿದ. ಕಾಲೆಳೆದುಕೊಂಡು ನಡೆಯಿತು ಕೋತಿ ಗುಡು ಗುಡು ಅಂತ.

"ತಾಯಿ ಮನೆಗೆ" ಎಂದು ಕೇಳಿದ. ಸರಸರ ನಡೆಯಿತು ಆ ಕೋತಿ.

ಗಂಟು ತೆಗೆದುಕೊಂಡು ಕೋತಿಯ ಕೈಲಿ ಬುತ್ತಿಯೊಂದನ್ನು ಕೊಟ್ಟ.

ಬುತ್ತಿ ಹಿಡಕೊಂಡು ಹ್ಯಾಂಗೆ ಶಾಲೆಗೆ ಹೋಗ್ತಿ ಎಂದ ಆಡಿಸುವವ.

ಟಿಫಿನ್ ಕ್ಯಾರಿಯರ್ ತೆಗೆದುಕೊಂಡು ಹೋಗುವ ಶಾಲೆ ಹುಡುಗರ ಹಾಗೆ ಕೋತಿ ನಡೆದು ಅಣಕಾಡಿತು.

ಬುತ್ತಿ ಇಸುಕೊಂಡ. ಆಮೇಲೆ ಆಡಿಸುವವ ಕೋಲೊಂದನ್ನು ಕೋತಿಯ ಕೈಗೆ ಕೊಟ್ಟ.

ಕೋಲು ಹಿಡಿದುಕೊಂಡು ಹ್ಯಾಗೆ ವಾಕಿಂಗ್ ಹೋಗ್ತಿ ಎಂದ ಆಡಿಸುವವ.

ಮುದುಕರು ಕೋಲು ಹಿಡಿದು ನಡೆಯುವ ತರಹ ಕೋತಿ ಮುಂದಗಾಲು ಹಾಕುತ್ತ ನಡೆಯಿತು. ಅನಂತರ ಕೋಲೀಸುಕೊಂಡ. ಬಿಸಿಲ್ಗನ್ನಡಕ ಕೋತಿಗೆ ಹಾಕಿದ. "ಗೀತೇನ ಹೇಗೆ ಪಾರಾಯಣ ಮಾಡ್ತಿ" ಎಂದ ಆಡಿಸುವವ. ಕೋತಿ ಕೂತುಕೊಂಡು, ಕಾಗದದ ಚೂರೊಂದನ್ನು ಕೈಲಿ ಹಿಡಿದುಕೊಂಡು ಕನ್ನಡಕವನ್ನು ಹಣೆಯಮೇಲಿರಿಸಿ, ಎಲ್ಲೋ ನೋಡುತ್ತ ವಟವಟ ಗುಟ್ಟಿತು.

ಸುತ್ತ ನೆರೆದವರೆಲ್ಲಾ ಕೇಕೇ ಹಾಕಿ ನಕ್ಕರು.

ಆಗ ಕೋತಿ ಆಡಿಸುವವ ಲಾವಣಿ ತರಹ ಹಾಡಿದ.

ಕೋತಿ ಕೈಯಿನ ಗಂಟು ಹೋಯ್ತು!
ಡುಬ್ ಡುಬು ;—ಬುತ್ತಿ ಬಂತು
ಬುತ್ತಿ ಹೋಯ್ತು ಊಟ ಹೋಯ್ತು
ಡುಬ್ ಡುಬ್ ;—ಕೋಲು ಬಂತು
ಕೋಲು ಹೋಯ್ತು ಕುಂಟು ಬಂತು
ಡುಬ್ ಡುಬ್ ;—ಕನ್ನಡಕ ಬಂತು
ಕನ್ನಡಕ ಬಂತು ದೃಷ್ಟಿ ಬರ್ಲಿಲ್ಲ
ಡುಬ್ ಡುಬ್ ;—ದೃಷ್ಟಿ ಬರ್ಲಿಲ್ಲ

ಅಂತ ಹಾಡಿದ. ಕೋತಿ ಈ ವೇಳೆಗೆ ತಟ್ಟೆ ಹಿಡಿದುಕೊಂಡು ಎಲ್ಲರ ಹತ್ತಿರ ಭಿಕ್ಷೆ ಬೇಡುತ್ತಾ ಸುತ್ತಾಡಲು ಹೊರಟಿತು.

* * * *

ಕಾಳಿಂಗರಾಯರಿಗೆ ಚೇಳು ಕಚ್ಚಿದ ಹಾಗಾಯ್ತು, ಈ ಆಟ ನೋಡಿದಾಗ ಈ ಲಾವಣಿ ಕೇಳಿದಾಗ. ಬೇಗ ಬೇಗ ನಡೆದು ಹೊರಟರು. ಊರಂಚಿನ ಅಶ್ವತ್ಥ

ಕಟ್ಟೆಯ ಹತ್ತಿರ ಹೋದಾಗ, ಏದುಬ್ಬಸ ಬಂದಿತ್ತು. ಸ್ವಲ್ಪ ಹೊತ್ತು ಕೂತಿರೋಣ ಅಂತ ಅಲ್ಲಿ ಕುಳಿತರು; ಸುಧಾರಿಸಿಕೊಳ್ಳುತ್ತಾ,

ಏನೆಲ್ಲಾ ಯೋಚನೆಗಳು ಮೂಡಿ ಕೂಡಲೆ ಮಾಯವಾದವು. ಕಡೆಗೆ ಅವರೂ ಒಂದು ಲಾವಣಿ ತರಹ ಗುಂಯ್‌ಗುಟ್ಟಿದರು.

ಕೋತಿ ಕೈಯಿಗೆ ಗಂಟು ಬಂತೂ
ಡುಬ್ ಡುಬು—ನಂಗೆ ಷೋಕೀನೂ ಬಂತು.
ಷೋಕಿ ಜತೆಗೆ ವೋಜೂ ಬಂತು
ಡುಬ್ ಡುಬು—ಜಂಭಾನು ಬಂತು
ಜಂಭಕ್ಕೆ ಒತ್ತೆ ಬಿತ್ತು
ಡುಬ್ ಡುಬು—ಕೋಪ ಬಂತು
ಕೋಪ ಬಂದಾಗ ಬುತ್ತಿ ಹೋಯ್ತು
ಡುಬ್ ಡುಬು—ಊಟ ಹೋಯ್ತು.

* * * *

ಕಾಳಿಂಗರಾಯರು ಮನೆಗೆ ಹೋದರು. ಬರೆದಿಟ್ಟಿದ್ದ ಉಯಿಲನ್ನು ತೆಗೆದರು. ಹರಿದು ಹಾಕಿದರು. ಚೂರುಗಳನ್ನೆಲ್ಲಾ ಬಚ್ಚಲಮನೆ ಒಲೆಗೆ ಹಾಕಿದರು. ನಂತರ ಹಾಯಾಗಿ ಮಲಗಿದರು. ಮಧ್ಯಾಹ್ನದ ಊಟಕ್ಕೆ ಮನೆಯೋರು ಎಬ್ಬಿಸೋತನಕ ಸುಖವಾಗಿ ನಿದ್ರೆ ಮಾಡಿದರು.

—ಬಚ್ಚಿ.

ಹೊಡೆಯೋ ರಭಸ, ಆಗೋ ಗುಡುಗು, ಎಲ್ಲವನ್ನೂ ನೋಡಿದ ಮೇಲೆ ಇದನ್ನು ಯಾಕೆ "ಮೃದಂಗ" ಅಂತಾರೋ ಅನ್ನಿಸುತ್ತೆ.

* * * *

ಸಮುದ್ರದ ಅಲೆಕಳ ಉಬ್ಬರವಿಳಿತಗಳಿಂದ ಕ್ರಿಕೆಟ್ ಆಟದ ಹಸೆಮಣೆಯು ಬಾರ್ಬಡಾಸ್‌ನಲ್ಲಿ ಕೆಟ್ಟು ಹೋಗಿದ್ದುದರಿಂದ

—ಆಡಿದ ನಮ್ಮವರ ಯಜ್ಞವೇ ಆಯಿತಂತೆ!

* * * *

ನಮ್ಮ ಸಂಘದಲ್ಲಿ ಚುನಾವಣೆಗಳು

ಈ ಸಾರಿ ನಮ್ಮ ವೈಗಳ್ಳರ ಸಂಘದ ಚುನಾವಣೆಯಲ್ಲಿ, ಹಿಂದೆ ಎಂದೂ ನಡೆಯದ ಚಟುವಟಿಕೆಗಳು ನಡೆದು ಹೋದವು. ಇದುವರೆವಿಗೆ ಚುನಾವಣೆಯನ್ನ ಒಂದು ವ್ರತದ ಹಾಗೆ ಆಚರಿಸುತ್ತಿದ್ದವರು, ಈ ಸಾರಿ ದೀಪಾವಳಿ ಮತ್ತು ಮಾರೀ ಹರಕೆಗಳನ್ನ ಒಟ್ಟಿಗೆ ಆಚರಿಸುವ ರೀತಿ ನಡೆಸಿದೆವು. ಕಾರಣ ಇಷ್ಟೆ-ನಮ್ಮಲ್ಲಿ ಗುಂಪು ರಾಜಕೀಯ ಸುರುವಾಗಿಬಿಟ್ಟಿದೆ. ಗುಂಪಿದ್ದ ಕಡೆ ರಾಜಕೀಯವಿರಬೇಕು-ರಾಜಕೀಯವಿದ್ದ ಕಡೆ ಗುಂಪುಗಳಿರಬೇಕು ಅನ್ನುವುದು ನಮ್ಮ ಪ್ರಜಾಪ್ರಭುತ್ವದ ಮೂಲ ಸತ್ಯವಾದರೂ ನಮ್ಮ ವೈಗಳ್ಳರ ಸಂಘದ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳ ಮಟ್ಟಕ್ಕಿಳಿದಿದ್ದು ಇದೇ ಮೊದಲು.

ನಿಮ್ಮೆಲ್ಲರಿಗೂ ತಿಳಿದ ಹಾಗೆ ನಮ್ಮ ವೈಗಳ್ಳರ ಸಂಘದಲ್ಲೂ ಉಪಸಂಘಗಳಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಸಂಘದಲ್ಲಿ ಬ್ರಹ್ಮಾಂಡವೇ ಅಡಗಿದೆ. ಮನ್ನಾಡೇ ಆರಾಧಕರು, ಅಶ್ವಪ್ರೇಮಿಗಳು, ಮುಖೇಶ್ ಹಿಂಬಾಲಿಕರು, ದೇವ್ ಆನಂದ್ ಪೂಜಾರಿಗಳು, ಟೆರಿಲಿನ್ ಲೀಗ್ ಇತ್ಯಾದಿ ಇತ್ಯಾದಿ. ಇವರೆಲ್ಲಾ ತಮ್ಮ ಗುಂಪುಗಳನ್ನು ಭದ್ರಪಡಿಸಿ ಮಿಕ್ಕ ಗುಂಪುಗಳಿಗೆಲ್ಲಾ "ಕೋಂಗ್ರೆಸ್" ಮಾಡಿ ಸಂಘದ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಹವಣಿಸುತ್ತಿರುತ್ತಾರೆ. ಆದರೆ ನಮ್ಮ ಸಂಘದ ಸದಸ್ಯರೆಲ್ಲರೂ ತುಸ ಮುಟ್ಠಾಳರೂ ಆಗಿದ್ದರಿಂದ ಅಂತಹ ದುರಂತವೇನೂ ನಡೆದಿಲ್ಲ.

ಶೌರಿಯ ಸಲಹೆಯಂತೆ ನಾನು ನಡೆದುಕೊಂಡಿದ್ದರೆ ಈ ಚುನಾವಣೆಯಿಂದ ದೂರವಿರಬಹುದಿತ್ತು. ಆದರೆ ಶೀನಿ ಸೋಮು ಇವರುಗಳ ಕುಮ್ಮಕ್ಕಿನಿಂದ ಅಶ್ವ ಪ್ರೇಮಿಗಳ ಪರ ಉಮೇದುವಾರನಾಗಿ ಸ್ಪರ್ಧೆಗಿಳಿದೆ. ನಾನು ಚುನಾಯಿತನಾಗಿ ಬಂದರೆ ನಮ್ಮ ವೈಗಳ್ಳರ ಸಂಘದಲ್ಲಿಯೇ ಅಲ್ಲದೆ ಇಡೀ ದೇಶದಲ್ಲೇ ಅಶ್ವಪ್ರೇಮ ಹೆಚ್ಚಿಸಿ, ರೇಸುಗಳ ಬಗ್ಗೆ ಪ್ರೋತ್ಸಾಹ ನೀಡಿಸಿ, ನಮ್ಮ ದೇಶದಲ್ಲಿ ನೂರಾರು 'ಮಾಂಟೆಕಾರ್ಲೋ'ಗಳನ್ನು ನಿರ್ಮಾಣ ಮಾಡಿಸುತ್ತೇನೆಂದು ಘೋಷಿಸಿದೆ. ನನ್ನ ಗುರ್ತು ಕುದುರೆ.

"ಕಾಲದ ಗಡಿಯಾರವನ್ನು ಹಿಂದಕ್ಕೆ ತಿರುಗಿಸುತ್ತಿದ್ದೀರಿ ಅಂತ ಜನ ತಿಳಿಯಬಹುದು ಸರ್" ಅಂದ ಶೌರಿ.

" ಜನ ಶುದ್ಧ ಶುಂಠರು ಶೌರಿ. ಕಾಲದ ಗಡಿಯಾರ ನಿಂತೇ ಹೋಗುವುದಕ್ಕಿಂತಲೂ ಹಿಂದಕ್ಕಾದರೂ ಹೋದರೆ ಎಷ್ಟೋ ವಾಸಿ ಶೌರಿ" ಅಂದೆ.

ನನ್ನ ವಾದದ ಚಮತ್ಕಾರ ಪುನಃ ಪುನಃ ನಾನೇ ನೆನೆಸಿಕೊಂಡು ಹಿಗ್ಗುತ್ತಿದ್ದೇನೆ.

" ಸರಿ ಸರ್" ಅಂದ ಶೌರಿ

ಚುನಾವಣೆ ಸಮೀಪ ಬರುತ್ತ ಬರುತ್ತ ಪ್ರಚಾರ ಬಲವಾಯ್ತು. ಮನ್ನಾಡೇ ಆರಾಧಕರಿಗೂ, ಮುಖೇಶ್ ಹಿಂಬಾಲಿಕರಿಗೂ ತೀವ್ರ ಸ್ಪರ್ಧೆ ನಡೆಯಿತು. ಬೆಂಗಳೂರಿನಿಂದ, ರಾಜ, ಚಂದಿ ಇಬ್ಬರೂ ನೂರಾರು ಒಡಕಲು ಗ್ರಾಮಾಫೋನ್ ರಿಕಾರ್ಡುಗಳನ್ನು ಒಂದು ತುಕ್ಕು ಹಿಡಿದ ಗ್ರಾಮಾಫೋನಿನಲ್ಲಿ ಹಾಡಿಸಿ ಹವ ಕೆಡಿಸಿದರು. ಇದು ಸಾಲದು ಅಂತ ಕೇಳಿದ ಪ್ಲೇಟಿಗೆ 25 ನ. ಪೈ.ಯಂತೆ ವಸೂಲ್ಮಾಡಿ ಗೋಳಾಡಿಸಿದರು. ಸಿನಿಮಾ ಜಾಹಿರಾತುಗಳು, ಸೋಪಿನ ಪೆಟ್ಟಿಗೆ ತಾರೆಯರು, ಸಿಗರೇಟು ಬೀಡಿಯ ಪ್ರಚಾರ ಚಿತ್ರಗಳು ನಮ್ಮ ಸಂಘದ ಆವರಣದಲ್ಲಿ ಮೆರೆಯ ಹತ್ತಿದವು. ದೀಪಾವಳಿ, ಮಾರೀ ಹರಕೆ ಜೊತೆಗೆ ಕನ್ನಡಜಿಲ್ಲೆ ಯಕ್ಷಗಾನವೂ ಸೇರಿದ ಹಾಗಾಯ್ತು. ನನಗೂ ಪ್ರಚಾರದ ಬಗ್ಗೆ ಕುತೂಹಲ ಹೆಚ್ಚಿತು.

" ಶೌರಿ"

" ಸರ್"

" ಒಂದು ಕುದುರೆ ಎಲ್ಲಿಂದಲಾದರೂ ಸಂಪಾದಿಸಬಲ್ಲೆಯಾ?"

" ದಿನಕ್ಕೆ 12 ರೂಪಾಯಿನಂತೆ ನಜೀರ್ ತನ್ನ ಟಾಂಗಾ ಕುದುರೆ ಬಾಡಿಗೆಗೆ ಕೊಡ್ತಾನೆ ಸರ್"

" ಹಾಗಾದರೆ ಒಂದ್ಯೆವತ್ತುರೂಪಾಯಿ ಅಡ್ವಾನ್ಸ್ ಕೊಟ್ಟು...."

" ನಿನ್ನೆ ಅಡ್ವಾನ್ಸ್ ಕೊಟ್ಟಿದ್ದೇನೆ ಸರ್. ಕುದುರೆ ಓಪೆಲ್ಲಿನ ಬಂಪರ್‌ಗೆ ಕಟ್ಟಿ ಹಾಕಿ ತಾನೂ ಅಲ್ಲೇ ನಿಂತಿದ್ದಾನೆ"

" ಸರಿ ಶೌರಿ"

ಕುದುರೇನ ನೋಡಿ ನನಗೇನೂ ಅಷ್ಟು ಒಪ್ಪಿಗೆಯಾಗದಿದ್ದರೂ ಪಕ್ಕದಲ್ಲಿ ನಿಂತಿದ್ದ 'ಪಾರ್ಥಸಾರಥಿ'ಯನ್ನು ನೋಡಿ ಸಮಾಧಾನವಾಯ್ತು. ನನ್ನನ್ನು ನೋಡಿದ ತಕ್ಷಣ ಬೀಡಿ ತುಂಡನ್ನು ಬಿಸಾಡಿದ.

" ಶೌರಿ"

" ಸರ್"

" ಇದನ್ನೇನು ಮಾಡಲಿ?"

" ನಂಗೊತ್ತಿಲ್ಲ ಸರ್"

" ಒಂದು ಕೆಲಸ ಮಾಡು ಶೌರಿ ಒಂದು ಬಾವುಟ ಹಿಡಿದು ಜಾಕಿಗಳ ಹಾಗೆ ಡ್ರೆಸ್ ಧರಿಸಿ ಈ ಕುದುರೆ ಮೇಲೆ ಕುಳಿತು ನನಗಾಗಿ ಓಟು ಕೇಳು. ಮತ್ತು ನಿನ್ನ

ಬೆನ್ನಿನ ಮೇಲೆ 'ಶ್ರೀ ಪಾಂಡು ಅವರಿಗೆ ನಿಮ್ಮ ಘನವಾದ ಓಟು' ಅಂತ ಬರೆದು....

"ಇಲ್ಲ ಸರ್ ಅದು ನನ್ನಿಂದ ಸಾಧ್ಯವಿಲ್ಲ"

ಶೌರಿ ಈ ರೀತಿ ಪ್ರತಿಭಟಿಸುತ್ತಾನೆ ಅಂತ ನನಗೆ ತಿಳಿದೇ ಇತ್ತು. ಆದರೂ ನನ್ನ ಗತ್ತು ಬಿಡಲಿಲ್ಲ.

"ಬಿಡು ಶೌರಿ ನಾನೇ ಅಶ್ವವೇರುತ್ತೀನೆ. ಎಲ್ಲಾ ತಯಾರು ಮಾಡು" ಅಂದೆ.

"ಸರ್"

"ಕಿವಿ ಕೇಳಿಸಲಿಲ್ವೆ ಶೌರಿ?"

"ಕೇಳಿಸಿತು ಸರ್. ಆದರೆ ನಂಬಲಿಲ್ಲ. ಬೇಕಾದರೆ ದಿನಕ್ಕೆ 3 ರೂಪಾಯಿ ಕೊಟ್ಟರೆ ನಜೀರ್ ಸ್ವತಃ ಆ ಕೆಲಸ ಮಾಡುತ್ತಾನೆ ಸರ್. ಅದರ ಬಗ್ಗೆ ಅವನಿಗೆ 12 ರೂಪಾಯಿ ಅಡ್ವಾನ್ಸ್ ಪ್ರತ್ಯೇಕ ಕೊಟ್ಟಿದ್ದೀನೆ ಸರ್"

ಇದು ಶೌರಿಯ ಗುಣ. ನನ್ನ ಉದ್ದೇಶಗಳನ್ನೆಲ್ಲಾ ಮೊದಲೇ ಊಹಿಸಿ ತನ್ನ ಕರ್ಮ ತೀರಿಸುತ್ತಾನೆ.

ಮನ್ನಾಡೇ, ದೇವ್‌ಆನಂದ್, ಮುಖೇಶ್ ಅವರುಗಳನ್ನು ಖುದ್ ಕರೆಸಿಬಿಡುತ್ತೀವೆಂದು ಹೇಳಿದವರು ತಾವೇ ತಮ್ಮ ಆದರ್ಶ ತಾರೆಯರ ವೇಷ ಧರಿಸಿ ಸಂಘದ ಸುತ್ತ ಹಾಡುತ್ತ ಕುಣಿದರು. ಚುನಾವಣೆಯ ಹಿಂದಿನ ದಿನವಂತೂ ನಮ್ಮ ಸಂಘದ ಆವರಣದಲ್ಲಿ ದೀಪಾವಳಿ, ಮಾರೀಹರಕೆ, ಯಕ್ಷಗಾನಗಳ ಜೊತೆಗೆ ಶ್ರೀರಿಂಗ್ ಸರ್ಕಸ್ ಸೇರಿದ ಹಾಗಾಯ್ತು.

ಈ ಸಮಯದಲ್ಲಿ ನಿಮಗೆ ನಮ್ಮ ಸಂಘದ ಒಟ್ಟು ಸದಸ್ಯರ ಸಂಖ್ಯೆ-403. ಈ ಸಂಖ್ಯೆ ಹೆಚ್ಚುವ ಹಾಗಿಲ್ಲ. ಕಡಿಮೆಯಾಗಲಾರದು. ಹೊಸ ಸದಸ್ಯರು ಬರಬೇಕಾದರೆ ಈ ಸಂಖ್ಯೆಯಲ್ಲಿ ಒಂದು ಖಾಲಿಯಾಗಬೇಕು. ನಮ್ಮ ವಿಧಾನಸಭೆಯಲ್ಲಿ 51 ಸ್ಥಾನಗಳಿವೆ. ಇದಕ್ಕೆ ನಮ್ಮ 403 ಜನರೂ ಸ್ಪರ್ಧಿಗಳು. ಮೂರು ವರ್ಷಕ್ಕೊಮ್ಮೆ ಚುನಾವಣೆ ಪ್ರವಾಹ ಬಂದು ಎಲ್ಲ ಚುನಾವಣೆಗಳಲ್ಲಿನ ಹಾಗೆ ಮಾನ, ಮರ್ಯಾದೆ, ಗಂಭೀರ, ಸ್ನೇಹ ಎಲ್ಲವನ್ನೂ ಕೊಚ್ಚಿಕೊಂಡು ಹೋಗುವ ವಾಡಿಕೆ. ಸಾವಿರ ಕಾಮನ ಹಬ್ಬಗಳನ್ನು ಒಟ್ಟಿಗೆ ಆಚರಿಸುವ ಹಾಗೆ ಕಾಣುತ್ತೆ. ನಮ್ಮ ಸಂಘ ಶುರುವಾದಾಗ ಕೇವಲ ಎರಡೇ ಗುಂಪುಗಳಿದ್ದುವು ಮೈಗಳ್ಳರು, ಸೋಮಾರಿಗಳು. ಆದರೆ ಬರುತ್ತ ಬರುತ್ತ ಕ್ರಾಸಿಂಗ್ ದಿ ಫ್ಲೋರ್ (Crosing the floor) ಜಾಸ್ತಿಯಾಗಿ ಸೋಮಾರಿಗಳೆಲ್ಲಾ ಅಸಲೀ ಮೈಗಳ್ಳರಾದರು. ಇದು ಒಂದು ಕಂಟಕವೇ ಆಯ್ತು. ಏಕೆಂದರೆ ಸೋಮಾರಿಗಳು ಪತ್ರಿಕೆಗಳನ್ನು ಕೂಡ ಓದುವವರಲ್ಲ. ಮೈಗಳ್ಳರಾದರೋ ಮಿಕ್ಕೆಲ್ಲ ಕೆಲಸಗಳನ್ನು ಬಿಟ್ಟು, ಪತ್ರಿಕೆ ಪತ್ತೇದಾರಿಗಳನ್ನು ಓದಿ ಕಾಲ ಕಳೆವರು. ಇದರಿಂದ ಕಾಲಕ್ರಮೇಣ ರಾಜಕೀಯದ

ಸೊಂಕು ಹತ್ತಿತು. ಬೇರೆ ಬೇರೆ ಪಕ್ಷಗಳಾದ ಮೇಲೆ ಮೂಲ ಹೆಸರು ಮಾತ್ರ ಸಂಘಕ್ಕೆ ಸ್ಥಿರವಾಯ್ತು (Vide ನಾಜೋಕಯ್ಯ).

ಈಗ 51 ಸ್ಥಾನಕ್ಕೆ ಸ್ಪರ್ಧಿಸಿರುವ ಪಕ್ಷಗಳು:—(1) ಅಶ್ವಪ್ರೇಮಿಗಳು (2) ಮನ್ನಾಡೇ ಆರಾಧಕರು (3) ಮುಖೇಶ್ ಹಿಂಬಾಲಿಕರು (4) ದೇವ್ಆನಂದ್ ಪೂಜಾರಿಗಳು (5) ಓ. ಸಿ. ಗ್ಯಾಂಗ್ (6) ಟೆರಿಲಿನ್ ಲೀಗ್ (1) ಸರ್ವಪಕ್ಷಿಗಳು (ಒಂದಕ್ಕಿಂತ ಹೆಚ್ಚು ಪಕ್ಷಗಳೊಡನೆ ಸಂಪರ್ಕವಿಟ್ಟುಕೊಂಡವರು) (1) ಬೇ ಪಕ್ಷಿಗಳು (ಯಾವುದಕ್ಕೂ ಸೇರದವರು.)

ಇದರಲ್ಲಿ ಪ್ರತಿಯೊಂದು ಪಕ್ಷದಲ್ಲೂ 51 ಸದಸ್ಯರಿದ್ದು, ಬೇ ಪಕ್ಷಿಗಳಲ್ಲಿ 46 ಸದಸ್ಯರಿದ್ದಾರೆ. ಅಂದರೆ ವಿಧಾನಸಭೆಯ 51 ಸ್ಥಾನಗಳಿಗೆ ಮೊದಲ 7 ಪಕ್ಷಗಳಿಂದ ಎಲ್ಲಾ ಸ್ಥಾನಗಳಿಗೂ, ಬೇ. ಪಕ್ಷಿಗಳಿಂದ 46 ಸ್ಥಾನಗಳಿಗೂ ಸ್ಪರ್ಧೆ ಇತ್ತು.

ಚುನಾವಣೆಯ ದಿನ ನಿ. ಪ್ರ್. ಪ್ರಾ. ಕರಡಿ ಉಗ್ರಸೇನರಾಯರೂ, ಪಲ್ಲು ಮಾವ ಗಂಗಾಧರರಾಯರೂ ಉಸ್ತುವಾರಿ ನಡೆಸಿದರು. ರಾತ್ರಿ ಸುಮಾರು ಫಸ್ಟ್‌ಷೋ ಇಂಟರ್‌ವಲ್ ಹೊತ್ತಿಗೆ ಮತದಾನ ಮುಗಿಯಿತು. ಕೂಡಲೇ ಎಣಿಕೆಯೂ ಆಯ್ತು. ಏಕೆಂದರೆ ಸಾರ್ವತ್ರಿಕ ಚುನಾವಣೆಗಳಲ್ಲಿನ ಹಾಗೆ ಮತದಾನದ ಪೆಟ್ಟಿಗೆಗಳನ್ನು ನಮ್ಮ ಕಣ್ಮರೆಯಾಗಲು ನಾವು ಯಾರೂ ಒಪ್ಪಲಿಲ್ಲ. ಆದ್ದರಿಂದ ಬೆಳಗಿನ ಝಾವ ಕೋಳಿ ತನ್ನ ಹುಂಜನನ್ನು ಕುಕ್ಕಿ ಎಬ್ಬಿಸುವ ಹೊತ್ತಿಗೆ ಎಣಿಕೆ ಮುಗಿದು ಫಲಿತಾಂಶ ಹೊರಬಿತ್ತು—ಹೀಗೆ.

(1)	ಅ. ಪ್ರೇ.	51	ಪ್ರತ್ಯೇಕ ಓಟುಗಳು.
(2)	ಮ. ಆ.	51	ಪ್ರತ್ಯೇಕ ಓಟುಗಳು.
(3)	ಮು. ಹಿಂ.	51	,,
(4)	ದೇ. ಪೂ.	51	,,
(5)	ಓ. ಸಿ. ಗ್ಯಾ.	51	ಪ್ರತ್ಯೇಕ ಓಟುಗಳು.
(6)	ಟೆ. ಲೀ.	51	,,
(7)	ಸ. ಪ.	51	,,
(8)	ಬೇ. ಪ	46	,,
		403	ಪ್ರತ್ಯೇಕ ಓಟುಗಳು.

ಅಂತೂ ನಮ್ಮ ಸಂಘದ ಚುನಾವಣೆಗಳು ಚರಿತ್ರಾರ್ಹ. ಪ್ರತಿಯೊಬ್ಬ ಮತದಾರನೂ ಅಭ್ಯರ್ಥಿಯಾಗಿ ತನ್ನ ಮತವನ್ನು ತನಗೇ ದಾನಮಾಡಿ ರಾಜಕೀಯ

ಇತಿಹಾಸದಲ್ಲೇ ಮೊದಲು. ಹಾಗೂ ಶೇಕಡಾ ನೂರರಷ್ಟು ಮತದಾನ ನಡೆದು ಒಂದು ಮತವೂ ಕೆಡದೆ ಇದ್ದದ್ದೂ ನಮ್ಮ ವಯಸ್ಕರ ಮತದಾನ ಪದ್ಧತಿಗೇ ಆದರ್ಶ ಪ್ರಾಯ! ಆದರೆ ಒಂದೇ ಒಂದು ತಲೆನೋವು ನಮ್ಮ ವಿಧಾನ ಸಭೆ ಮಾತ್ರ ರಚಿಸ ಲಿಕ್ಕಾಗಲಿಲ್ಲ. ಇದು ಸಣ್ಣ ವಿಚಾರ. ಎಷ್ಟೋ ಕಡೆ ವಿಧಾನಸಭೆ ತಯಾರಾಗಿ ಮಂತ್ರಿಮಂಡಲ ರಚಿಸಲಿಕ್ಕಾಗದಿದ್ದಾಗ ನಮ್ಮಲ್ಲಿ ವಿಧಾನಸಭೆ ರಚಿಸಲಿಕ್ಕಾಗ ದ್ದಿದ್ದದ್ದು ಎಷ್ಟೋ ಕ್ಷೇಮ ಮತದಾರರೆಲ್ಲ ವಿಧಾನಸಭೆ ಸದಸ್ಯರಾದರೆ ತಾನೇ ಏನು ನಷ್ಟ? ಮಂತ್ರಿ ಮಂಡಲಿ ಬೃಹತ್ ತಳಹದಿಯ ಮೇಲೆ ಕಟ್ಟಿಸಬಹುದು! ಅಂತೂ ನಮ್ಮ ಮತದಾನ ನಡೆದ ಮಾದರಿ ನೋಡಿದರೆ ನಮಗೆಲ್ಲ ಸಮವಾದ ಅರ್ಹತೆ ಹಕ್ಕುಗಳಿದ್ದು ನಾವೆಲ್ಲ ಪ್ಯೂರ್ ಸೋಷಿಯಲಿಸ್ಟ್ಸ್ (Pure Socialist) ಅಂತ ಹೇಳಬಹುದು. ಆದರೆ ಸೋಮು ಮತ್ತು ಇತರರು ಈ ವಾದಕ್ಕೆ ಒಪ್ಪೊಲ್ಲ. ಎಲ್ಲರಿಗೂ ಸರಿಸಮಾನ ಸ್ವಾತಂತ್ರವಿರುವುದರಿಂದ ನಾವೆಲ್ಲ ಸ್ವತಂತ್ರ ಪಾರ್ಟಿ ಅಂತ ಅವರ ವಾದ.

ಎಣಿಕೆ ಮುಗಿದ ಮೇಲೆ ನಜೀರ್‌ನ ಹತ್ತಿರ ಕರೆದು ನನ್ನ ಉಚ್ಚೈಶ್ರವಸ್ಸನ್ನು ಕರೆತರಿಸಿದೆ. ಅದರ ಮೇಲೆ ನಿಮಿಷವಾದರೂ ಸವಾರಿ ಮಾಡುವ ಆಸೆ ಸಿತು. ಅತ್ತಿತ್ತ ನೋಡಿದೆ ಶೌರಿ ಕಾಣಿಸಲಿಲ್ಲ. ಒಳ್ಳೆಯದೇ ಆಯ್ತೆಂದು ನಜೀರ್‌ಗೆ ಎಚ್ಚರಿಕೆ ಕೊಟ್ಟು ಕುದುರೆ ಮೇಲೆ ನೆಗೆದೆ.

"ಕಾಫಿ ಸರ್" ಅನ್ನುತ್ತಾ ಶೌರಿ ನನ್ನ ಮುಂಜಾನೆಯ ಕಾಫಿ ತಂದ.

"ಪ್ರಾಯಶಃ ರಾತ್ರಿ ಹೊರಳಾಡಿ ಮಂಚದಿಂದ ಬಿದ್ದಿರಬೇಕು ಸರ್" ಅಂದ.

ಎದ್ದೆ.

"ಶೌರಿ ನೀ ತಂದ ಕುದುರೆ...."

"ನಿಮಗಿನ್ನೂ ಸರಿಯಾಗಿ ಎಚ್ಚರವಾಗಿಲ್ಲ ಸರ್...."

"ನಮ್ಮ ಸಂಘದ ಚುನಾವಣೆ ನಡೀಲಿಲ್ವೆ ಶೌರಿ?"

"ಎಲ್ಲಿ ಬಂತು ಸರ್ ನಿನ್ನೆ ನೀವು ರೇಡಿಯೋದಲ್ಲಿ ಚುನಾವಣೆ ಸಮಾಚಾರ ಕೇಳಿದ್ದೇ ಆಗಲಿಲ್ಲ. ನಾನು ಆದಕ್ಕೇ ಸಿಲೋನ್ ತಿರುಗಿಸಿದ್ದೆ ಹಾಗೇ ಇದ್ದಿದ್ದರೆ ಚೆನ್ನಾಗಿತ್ತು"

"ಹೌದು ಶೌರಿ"

—"ಕೇಶ"

ಮಹಾಭಾರತದ ಪ್ರಶಸ್ತಿಗಳು

—:೦:—

ಯಾವುದಾದರೂ ಒಂದು ಒಳ್ಳೆಯ ಕೆಲಸವನ್ನು ಆರಂಭಿಸಿದರೆ, ಮೊದಲು ಮೊದಲು ಸ್ವಲ್ಪ ಕುಮ್ಮಕ್ಕು ಕೊಟ್ಟರೆ, ಸೂಕ್ತ ಕಾಲದಲ್ಲಿ ಅದು ತನಗೆ ತಾನೇ ಮರಿ ಹಾಕಲು ಪ್ರಾರಂಭಿಸುತ್ತದೆ ಎಂದು ಹಿರಿಯರು ಹೇಳುತ್ತಿದ್ದರು. ಉದಾಹರಣೆಗೆ ಬಡ ವಿದ್ಯಾರ್ಥಿಯೊಬ್ಬನಿಗೆ ವಾರದ ಊಟ ಹಾಕಿದರೆ, ಅವನು ಸಂಪಾದಿಸಿದಾಗ, ತಿಂಗಳು ಊಟವನ್ನು ಹತ್ತು ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಹಾಕುತ್ತಾನೆ, ಆಮೇಲೆ ಅವರುಗಳು ಪ್ರವರ್ಧಮಾನಕ್ಕೆ ಬಂದು, ಎರಡೆರಡು ತಿಂಗಳು ಎರಡು ಹೊತ್ತು ಊಟಾನ ನೂರು ನೂರು ವಿದ್ಯಾರ್ಥಿಗಳಿಗೆ ಇತ್ಯಾದಿ ಇತ್ಯಾದಿ. ತಿಳಿಯೋದಲ್ಲ ಕೊನೆ ಫಲಿತಾಂಶ.

ಹಾಗೇನೆ ನಮ್ಮ ಘನ ಸರ್ಕಾರದವರು ಕ್ರೀಡಾಪಟುಗಳಿಗೆ, ಈ ವರ್ಷ ಯಶಸ್ವಿಯಾಗಿ ಆಡಿದ್ದರಿಂದ, ಅರ್ಜುನ ಪ್ರಶಸ್ತಿಯನ್ನು ದಯಪಾಲಿಸಿದರು. ಈ ಒಳ್ಳೆಯ ಕೆಲಸ ಹಾಗೇ ನಿಲ್ಲಲು ಸಾಧ್ಯವೇ? ಇದೂ ಕೂಡ ಮರಿ ಹಾಕಿ ಪರಂಪರೆ ಬೆಳೆಸಬೇಡವೇ?

ದೇಹ ದಾರ್ಢ್ಯವನ್ನು ಹೊರವಾಗಿ ಬೆಳೆಸಿ, ನಡೆದಾಡಲು ಏದುಬ್ಬಸ ಬರುವಂತಾಗುವಂತೆ ಭೀಮಕಾಯರಾದ ಅಷ್ಟಗ್ರಹ ಋತ್ವಿಕರು, ಪುರೋಹಿತರುಗಳು ಯಾಜ್ಞಿಕರು ಇವರಿಗೆಲ್ಲಾ ತೂಕಕ್ಕೆ ತಕ್ಕಂತೆ ಭೀಮ ಪ್ರಶಸ್ತಿಗಳನ್ನು ಕೊಡಬಹುದಲ್ಲವೇ? ಭೀಮನ ಊಟದ ಮೋಜನ್ನೂ, ಅಡಿಗೆಯ ಕೌಶಲವನ್ನೂ ಸೂಚಿಸಿದಂತಾಗುತ್ತದೆ.

ಅದೇ ರೀತಿ ರಾಜಕೀಯ ತೆರೆಗಳ ಹಿಂದೆ, ಎಲೆ ಮರೆಯ ಪಗಡೆ ಕಾಯಿಗಳಂತೆ ನಿಂತು, ರಾಜಕಾರಣಿಗಳನ್ನು ಕುಣಿದಾಡಿಸುವ, ಹಣವಂತ ಹಾಗೂ ಮತವಂತ ಪುಡಾರಿಗಳಿಗೆ ಶಕುನಿ ಪ್ರಶಸ್ತಿಯನ್ನು ದಯಪಾಲಿಸಿ ಗೌರವಿಸಿದರೆ ಸಾರ್ಥಕ.

ಶಾಸ್ತ್ರಗಳನ್ನೋದಿ, ವಿಜ್ಞಾನವನ್ನು ಅಭ್ಯಾಸ ಮಾಡಿ ಆಳಧಿಕಾರಿಗಳಿಗೆ ಬುದ್ಧಿ ಹೇಳುಕ್ಕೆ ಹೋಗಿ ತಲೆ ಕೆಡಿಸಿಕೊಳ್ಳುವ ನೀತಿ ರೀತಿ ಹೇಳುವವರಿಗೆ ವಿದುರಪ್ರಶಸ್ತಿಯನ್ನೂ ಕೊಟ್ಟು ಹೀಗಾದರೂ ಸಮಾಧಾನ ಹೊಂದಿ ಅಂತ ಹೇಳಬಹುದಲ್ಲವೇ?

ಪಾಂಚಾಲಿ ಪ್ರಶಸ್ತಿಗೆ ಯೋಗ್ಯತೆಯನ್ನು ಹೊಂದಿರುವವರು ನಮ್ಮಲಿಲ್ಲವೇ? ಅವರಿಗೂ ಸನ್ಮಾನ ಮಾಡಬಹುದಲ್ಲವೇ, ಬಹಿರಂಗವಾಗಿ?

ನ್ಯಾಯದೇವತೆಯು ಕುರುಡೆಂದೂ ಪಕ್ಷಪಾತವಿಲ್ಲವೆಂದೂ ಹೇಳುತ್ತಾರೆ ಅಂದ ಮೇಲೆ ನಮ್ಮ ನ್ಯಾಯಾಚಾರ್ಯರಿಗೆ ಧೃತರಾಷ್ಟ್ರ ಪ್ರಶಸ್ತಿಯನ್ನು ಕಣ್ಣಿಗೆ ಕಟ್ಟಿ ಮೆರೆಸಬಹುದಲ್ಲವೇ? ನ್ಯಾಯದ ಛಾವಡಿಗಳಿಗೆ ಹೋಗಿ ತೊಂದರೆ ತೊಗೊಂಡು ಅನ್ಯಾಯ ಮಾಡಿಸಿಕೊಂಡು ಬಂದ ನಮ್ಮ ಜನ ಸಮೂಹವು ಇದನ್ನು ಖಂಡಿತ ಒಪ್ಪುತ್ತಾರಲ್ಲವೇ? ಅಷ್ಟೇ ಯಾಕೆ, ಇದೇ ಪ್ರಶಸ್ತಿಯನ್ನು ಪರೀಕ್ಷಕರಿಗೂ, ಸುಂಕದ ಕಟ್ಟೆಯವರಿಗೂ, ವರಮಾನ ತೆರಿಗೆಯಧಿಕಾರಿಗಳಿಗೂ, ಪರಸ್ಪರವಾಗಿ ಗಂಡ ಹೆಂಡತಿಯರೂ ಕೊಡಬಹುದಲ್ಲವೇ? ಬೇಕಾದರೆ ತಿಸ್ರಾವರ್ಗ ಗಾಂಧಾರಿ ಪ್ರಶಸ್ತಿ ಎಂದು ಕರೆದು ಹೆಣ್ಣುಮಕ್ಕಳ ಕಣ್ಣುಕಟ್ಟಿ ಬಿಡಬಹುದಲ್ಲವೇ?

ಕುದುರೆಜೂಜಿನ ಧಿಗ್ದಂತಿಗಳಿಗೆ " ನಕುಲ " ಪ್ರಶಸ್ತಿ

ಹಾಲು ಹೈನದ ಪಂಡಿತರಿಗೆ " ಸಹದೇವ " ಪ್ರಶಸ್ತಿ.

ಅಧಿಕಾರಿವರ್ಗದಲ್ಲಿದ್ದುಕೊಂಡು ಮೇಲ್ಮಂತ್ರಿಗಳ ಇಕ್ಕಳಕ್ಕೆ ಸಿಕ್ಕಿಕೊಂಡು ಇದ್ದ ಅಧಿಕಾರವನ್ನು ಸ್ವಲ್ಪವೂ ಚಲಾಯಿಸದೇ ಯಶಸ್ವಿಯೊದ ಹಿರಿಯಧಿಕಾರಿಗಳಿಗೆ ಕೆಲಸದಿಂದ ನಿವೃತ್ತರಾಗುವ ಮೊದಲು " ಶಿಖಂಡಿ " ಪ್ರಶಸ್ತಿ.

ತರಹಾವಾರಿ ಸೀರೆಗಳನ್ನು ರಾಶಿ ರಾಶಿ ಹಾಕಿ, ವ್ಯಾಪಾರ ಕುದುರಿಸುವ ಸೀರೆ ವ್ಯಾಪಾರಿಗಳಲ್ಲಿ ದೊಡ್ಡವರಿಗೆ ದುಶ್ಶಾಸನ ಪ್ರಶಸ್ತಿ.

ಮಗುವಿನ ಹಾಗೆ ಮುಂದೆ ನುಗ್ಗಿ ಹಿರಿಯ ರಾಜಕಾರಣಿಗಳಿಂದ ಛೀಮಾರಿ ಹಾಕಿಸಿಕೊಂಡು ರಾಜಕೀಯ ನಾಶ ಹೊಂದಿದ ಉತ್ಸಾಹಿ ಕ್ರಾಂತಿಕಾರರಲ್ಲಿ ಪೂರ್ಣ ನಿರ್ನಾಮ ಹೊಂದಿದವರಿಗೆ ಅಭಿಮನ್ಯು ಪ್ರಶಸ್ತಿ.

ಯಾವ ರಾಜ್ಯ ಯಾವ ಪುಡಾರಿ ಗುಂಪಿಗೆ ಸಿಕ್ಕಿದರೂ ನಮ್ಮ ತಲೆಯನ್ನು ನಾವು ಎತ್ತಿ ಹಿಡಿತೀವಿ ಎಂದು ಬಾಳಿನ ಮರ್ಮವನ್ನು ಕಲಿತ ವ್ಯಾಪಾರಸ್ಥರಲ್ಲಿ ಉದ್ದಾಮ ಹಣ ಹೊಡೆದವರಿಗೆ ಸೈಂಧವ ಪ್ರಶಸ್ತಿ.

ಇದೇ ರೀತಿ ಘನ ಸರ್ಕಾರದವರು ಆರಂಭಿಸಿದ ಒಳ್ಳೆಯ ಕೆಲಸವನ್ನು ಮುಂದುವರಿಸುವುದು ಸಹಜ!

ಅಲ್ಲವೇ?

—ಪ್ರಸಾದ್.

ಶ್ರೀ ಗುರು

ಬಹಿರಂಗ ಪತ್ರ

ಗೆಳೆಯ ನಾರಿ ಕಂಟ್ರಾಕ್ಟರ ಮಹಾಶಯರ ಸ॥ ಕ್ಕೆ। ನಾವು ಮಾಡುವ ವಿ।ಗಳು.

ಅಯ್ಯಾ ಮಿತ್ರನೆ,

ಬಾರ್ಬಡಾಸಿನ ಆಸ್ಪತ್ರೆಯೊಂದರಲ್ಲಿ ಆಪರೇಷ ಮಾಡಿಸಿಕೊಂಡು, ತೀರಾ ನಿಶ್ಶಕ್ತನಾಗಿರುವ ನೀನು ಈ ಕಾಗದ ತಲುಪುವ ವೇಳೆಗೆ, ಹಿಂತಿರುಗಿ ಭಾರತಕ್ಕೆ ಬಂದಿರುವೆಯೆಂಬುದೇ ನಮ್ಮ ನಿರೀಕ್ಷಣೆ. ದೇವರು ನಿನಗೊದಗಿರುವ ಗಂಡಾಂತರ ದಿಂದ ನಿನ್ನನ್ನು ಪಾರುಮಾಡಲಿ. ಅಜಾತ ಶತ್ರುವಾದ ನಿನ್ನನ್ನು ಹಿಂಸಿಸಿದವರಿಗೆ ತಕ್ಕ ಶಾಸ್ತಿಯಾಗಲಿ, ಅವರ ಕೈಗಳಿಗೆ ಕಜ್ಜಿಯೇಳಲಿ ಎಂದು ನಾವು ನಮ್ಮ ಕೆರೆ ಏರಿ ಚೌಡಮ್ಮ, ದುರುಗಮ್ಮ ಮೊದಲಾದ ಗ್ರಾಮ ದೇವತೆಗಳಿಗೆ ಹರಕೆ ಕಟ್ಟಿಕೊಂಡಿದ್ದೇವೆ. ಭಗವಂತನು ನಿನಗೂ, ನಿನ್ನ ಹಿಂಬಾಲಿಗರಿಗೂ ಸಮಸ್ತ ಸನ್ಮಂಗಳಗಳನ್ನುಂಟುಮಾಡಲಿ.

ಕೆಲವೇ ದಿವಸಗಳ ಕೆಳಗೆ ನಿನ್ನನ್ನೂ, ಉಳಿದ ನಮ್ಮ ಹುಡುಗರನ್ನೂ ಧಾರಾಳವಾಗಿ ಬೈಯುತ್ತಿದ್ದ ನಮಗೆ, ಈ ವಿಧಿ ವಿಡಂಬನ ತಿಳಿಯುವುದಾದರೂ ಹೇಗೆ. ನಿನ್ನನ್ನು ಕಂಡರೆ ನಮಗೆ ಸಿಟ್ಟೂ ಇಲ್ಲ, ಪ್ರೀತಿಯೂ ಇಲ್ಲ. ಪ್ರಸನ್ನನಿಗೆ ಸೆಕೆಂಡ್ ಟೆಸ್ಟಿನಲ್ಲಿ ನೀನು ಛಾನ್ಸ್ ಕೊಟ್ಟ ಮೇಲೆ ನಿನ್ನ ಬಗ್ಗೆ ಕಂಪ್ಲೆಂಟೇ ಇಲ್ಲ. ಈಗಲಾದರೂ ನಮ್ಮ ಹುಡುಗ ಎಂಥಾ ಯೋಗ್ಯ ಎಂದು ನಿನ್ನಂಥವನಿಗೂ ತಿಳಿದಿರಲಿಕ್ಕೆ ಸಾಕು. ಪ್ರಸನ್ನ ಇಲ್ಲದಿದ್ದರೆ ಏನಾಗುತ್ತಿತ್ತು ಎಂದು ಹೇಳುತ್ತೇನೆ ಕೇಳು. ಕಿಂಗ್ಸ್‌ಟನ್ ಟೆಸ್ಟಿನಲ್ಲಿ ನಮ್ಮ ಮೊದಲ ಇನ್ನಿಂಗ್ಸು ನಲವತ್ತು ನಿಮಿಷ ಮೊದಲೇ ಮುಗಿದು ವೆಸ್ಟಿಂಡೀಸರ ಸ್ಕೋರು 908 for 4, ಆಗುತ್ತಿತ್ತು. ಬೋರ್ಡೆ ಬೌಲಿಂಗ್ ಅನ್ಯಾಲಿಸಿಸ್ 70-8-298-0 ಆಗುತ್ತಿತ್ತು. ಆದುದರಿಂದಲೇ ನೀನು ಪ್ರಸನ್ನನಿಗೆ ಬೌಲಿಂಗ್ ಕೊಟ್ಟಾಗ ಸೋಬರ್ಸ್ ಮೊದಲಾದವರು 'Let surti come on' 'Borde to bowl' 'Ho, for umrigar' 'where is kripalsing?' 'Ranjane to bowl' ಎಂದಿತ್ಯಾದಿಯಾಗಿ ಕೂಗಿದರು. ಟೆಸ್ಟಿನಲ್ಲಿ ಇನ್ನಿಂಗ್ಸ್ ಡಿಫೀಟ್ ಹೊಂದಿ, ಹ್ಯಾಟ್ರಿಕ್ of defeats ದಾರಿಯಲ್ಲಿ ನೀವು ನುಗ್ಗುತ್ತಿದ್ದೀರಿ.

ಒಳ್ಳೇದು. ನಿಮ್ಮಿಂದ ಹೆಚ್ಚಿನದೇನನ್ನೂ ನಾವು ನಿರೀಕ್ಷಿಸಲಿಲ್ಲ. ನೀವು ಸಂಪನ್ನರು ಎಂದರೆ ಕೈಲಾಗದವರು, ತಪ್ಪು ನಿಮ್ಮದಲ್ಲ ಸೆಲೆಕ್ಟರುಗಳದು. ಕಸ್ತೂರಿಯನ್ನು ಬಿಟ್ಟು ರಂಜಾನೆ, ಸುರ್ತಿ Bah! ಸೋಲಿಗೆಂದು ನಾವು ಬೆದರುವವರಲ್ಲ.

ಆದರೆ ನೀವು ಕ್ರಿಕೆಟ್ ಬಲ್ಲವರೇ? ಎಂಬ ಅನುಮಾನವಿತ್ತು. ಈಗ ಅದಕ್ಕೆಲ್ಲಾ ಕಾಲವಿಲ್ಲ. ನಾವೀಗ ನಿನ್ನ ಪಾರ್ಟಿಗೆ ಸೇರಿದ್ದೇವೆ. ನೀವೇ ನಮ್ಮ ನಾಯಕರು. ನೀನು ಮಾಡಿದುದೆಲ್ಲಾ ಸಮರ್ಥನೀಯ.

ನಮ್ಮ ದೇಶದ ಕೆಲವು ಪತ್ರಿಕೆಗಳ ಸಂಪಾದಕರೂ, ವರದಿಗಾರರೂ ಇದೀಗ 'Is this Cricket' ಎನ್ನುತ್ತಿದ್ದಾರೆ. ಇನ್ನೂ ಇವರಿಗೆ ಅನುಮಾನವೇ? ಇದು ಕ್ರಿಕೆಟ್ಟಲ್ಲ. ವೆಸ್ಟಿಂಡೀಸಿನಲ್ಲಿ ಕೆಲವು ತಲೆ ತಿರುಕ ಕಟುಕರನ್ನು, ಹುಚ್ಚರನ್ನೂ ಚೆಂಡೆಸೆಯಲು ತಯಾರುಮಾಡಿರುತ್ತಾರೆ. ಇಬ್ಬರು ಮೂವರು ತಲೆಯೊಡೆದುಕೊಂಡ ಮೇಲೆ ಬಂಪರುಗಳನ್ನೆಸೆಯುವುದನ್ನು ಬಿಡುತ್ತಾರೆ. ಮಂತ್ರಿಗಳೂ, ಕ್ರೀಡಾ ಸಂಸ್ಥೆಗಳ ಅಧ್ಯಕ್ಷರೂ, ತಲೆಯೊಡೆದುಕೊಂಡವರಿಗಾಗಿ ಪ್ರಾರ್ಥಿಸುತ್ತಾರೆ. ಅವರ ಆಟದಲ್ಲಿ ನಯವಾಗಲೀ, ಉಲ್ಲಾಸವಾಗಲೀ, ಕ್ರೀಡಾಮನೋಭಾವವಾಗಲಿ ಇಲ್ಲ, ದನಘರ್‌ಗಳ ಸಂತೆ ಅದು.

ಅದಕ್ಕೆ ತಕ್ಕಂತೆ ನಮ್ಮವರಾದ ನೀವು ಟಿಸುಮುರುಗರು, ನೀವು ಸ್ನೇಹಪರರು ಕ್ರೀಡಾಮನೋಭಾವ ನಿಮ್ಮಲ್ಲಿದೆ. ನೀವು ಕ್ರೀಡೆಗಳಲ್ಲಿ ಪರಿಣತರಲ್ಲ, ಕೆಲ ದಿವಸಗಳ ಹಿಂದೆ, Contractor fails some how to clinch the issue ಎಂದು ವರದಿಗಾರನೊಬ್ಬ ಬರೆದಿದ್ದ. ಆದರೆ 'issue' ಇದ್ದರೆ ತಾನೆ ನೀನದನ್ನು 'clinch' ಮಾಡುವುದು. ಮದರಾಸಿನಲ್ಲಿ ನೀನು ರಬ್ಬರ್ ಗೆದ್ದಾಗ 'as tute captaincy' ಎಂದು ನಿನ್ನ ನಾಯಕತ್ವಕ್ಕೆ ಬಿರುದು ಕೊಟ್ಟಿದ್ದರು. ಎರಡೂ ತಪ್ಪು!

ಆದರೂ ಸಹಾ ಬಾರ್ಬಡಾಸ್ ಮ್ಯಾಚಿನಲ್ಲಿ ನೀವು ಸಮಯ ನೈಪುಣ್ಯತೆಯನ್ನು ಪ್ರದರ್ಶಿಸಲಿಲ್ಲ. 'ಅರೇ, ಮೈ ಕಹಾಂ ಹೊಂ' ಎಂದು ಕೇಳುತ್ತಿದ್ದೆ' ಎಂದು ನೀನು ಹೇಳಬಹುದು. ಪಟೌಡಿಗೇನಾಗಿತ್ತು, ಉಮ್ರಿಗರಿಗೆ ತಿಳಿಯಲಿಲ್ಲವೆ. ಸೊನ್ನೆ ಹೊಡೆದು ವಾಪಸು ಬಂದು ಅಳು ಬುರುಕರು, ಹೆಣ್ಣಕ್ಸ್, ಹೇಡಿಗಳು, ಎನ್ನಿಸಿಕೊಂಡರಲ್ಲಾ ಗ್ರಿಫಿತ್ತೋ, ಹಾಲೋ, ಹೆಡ್‌ಬ್ರೇಕೋ ಬೀಮರೋ, ಎಡ ಮುಂಡಿಗಾಲೂರಿ ಬ್ಯಾಟನ್ನು ಫಟಾರ್ ಎಂದು ಬೀಸಿ ಕೈಬಿಟ್ಟು ಬೌಲರಿಗೆ ಮಣ್ಣು ಮುಕ್ಕಿಸಲು ನಿಮ್ಮ ಕೈಲಾಗಲಿಲ್ಲವೇ? ಪಿಚ್ ಚೆನ್ನಾಗಿಲ್ಲ, ಗ್ರಿಫಿತ್ ಬಾಲನ್ನು ಕಂಡರೆ ಹೆದರಿಕೆಯಾಗುತ್ತದೆ ಎಂದು ಅಳಬೇಕೇ?

ಬೌಲರ್ ಬಹಳ ದೂರ ಎಂದರೆ ನಮ್ಮ ಗಾಡಿ ಬಸ್ಯನ ಹಾಗೆ ಹಿಂದಿರುಗಿ ವಿಕೆಟ್ ಕೀಪರ ತಲೆಗೆ ತಟ್ಟಿದ್ದರೆ! An eye for an eye and a tooth for a tooth ಎಂದು ಹಿಂದಿನವರು ಹೇಳಿದರು, ಆದರೆ ಎಲೈ ಪೇತ್ರನೇ a wicket keeper for a batsman and a bowler for bumper ಎಂದು ನಾನು ಹೇಳುತ್ತೇನೆ. ಮುಲಾಜೇಕೆ? ನಾವು ಭಾರತೀಯರಲ್ಲವೆ? ನಾವು ಸೆಲ್ಯೂಕಸನ್ನು ಸೋಲಿಸಲಿಲ್ಲವೇ?

ಪ್ರವಾಸದ ಸಂಘಟನೆ ಚೆನ್ನಾಗಿಲ್ಲ ಪಿಚ್ ಚೆನ್ನಾಗಿಲ್ಲ ಎಂದು ಗೋಗರೆಯಲು ಈಗ ಆರಂಭಿಸಬಾರದು. ಆದುದಾಗಲಿ ಕೈ ತೋರಿಸಿಯೇ ಬಿಡಬೇಕು. ಕ್ರಿಕೆಟ್ ಕ್ರೀಡೆಯ ಭವಿತವ್ಯದ ರೂಪುರೇಖೆಗಳು ನಮ್ಮ ಕೈಯಲ್ಲಿವೆ. ಭವಿಷ್ಯದ ನಿರ್ಮಾಪಕರು ನಾವು ಉತ್ಸಾಹಂ ಬಲವಾನ್, ನಾರಿ, ನಾಸ್ತ್ಯುತ್ಸಾಹಂಪರಂಬಲಂ' ವೆಸ್ಟಿಂಡೀಸ್ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾದ ಶ್ರೀ ಜಾರ್ಜ್ ಡೇರ್ ಮತ್ತು ಕೆರ್ ವಿಷಾರ್ಟರು ನಿನ್ನ ಆರೋಗ್ಯದ ಪುನರ್ಲಾಭಕ್ಕಾಗಿ ಪ್ರಾರ್ಥಿಸಲು ನಮ್ಮೆಲ್ಲರನ್ನು ಕೇಳಿಕೊಂಡಿದ್ದಾರಷ್ಟೆ. ನನ್ನ ಯೋಜನೆ ಕಾರ್ಯಗತವಾದರೆ, ವೆಸ್ಟಿಂಡೀಸ್ ಟೀಮಿನ ಮುಂದಿನ ಭಾರತ ಪ್ರವಾಸದಲ್ಲಿ ಶ್ರೀ ಚಿದಂಬರಂ ಮತ್ತು ಶ್ರೀ ಚಿನ್ನಸ್ವಾಮಿಯವರು ವೊರೆಲ್, ಸೋಬರ್ಸ್, ಕನ್ಹಾಯ್, ಸಾಲೊಮನ್, ಹಾಲ್, ನರ್ಸ್, ರಾಡ್ರಿಗ್ಯೂಸ್, ಹಂಟ್, ಮೆಕ್‌ಮಾರಿಸ್, ಮೊದಲಾದ ಸಮಸ್ತ ಕ್ರೀಡಾಪಟುಗಳ ಪ್ರಾಣ ಲಾಭಕ್ಕೆ ಪ್ರಾರ್ಥಿಸುವಂತಾಗುತ್ತದೆ. ಇದಕ್ಕೆ ಭಾರತೀಯ ಅಂಪೈರ್‌ಗಳ, ಸರಕಾರದ ವಿದೇಶೀ ವಕ್ತಾರರ, ಕಾಮೆಂಟೇಟರುಗಳ, ಸೆಲೆಕ್ಟರುಗಳ ಮತ್ತು ಪತ್ರಿಕೋದ್ಯೋಗಿಗಳ ಸಹಕಾರ ಅವಶ್ಯಕ.

ನಮ್ಮ ಮುಗಿಲುಹಳ್ಳಿ ತಾಲ್ಲೂಕಿನ ಕೊಳ ಹಾಳುಗ್ರಾಮದ ಗೊಲ್ಲರ ಹಟ್ಟಿಯಲ್ಲಿ ಕೆಂಜಡಿಯನೆನ್ನುವ ಹೊಲ ಕಾಯುವ ರೈತ ಕಾರ್ಮಿಕನಿದ್ದಾನೆ. ಅವನು ನೂರು ಗಜ ದೂರದ ಮರದ ಮೇಲೆ ಕುಳಿತ ಗುಬ್ಬಿಯನ್ನು ಕಲ್ಲಿನಿಂದ ಹೊಡೆಯಬಲ್ಲ. ಇಪ್ಪತ್ತೆರಡು ಗಜ ದೂರದ ಕರಿಯ ಕೊಣೆಯರನ್ನು ಹೊಡೆಯುವುದು ಅವನಿಗೆ ಮುಂಡಕ್ಕಿ ಉಂಡೆ ತಿಂದ ಹಾಗೆ.

ಆಗ, ಅವನು ಇಂಡಿಯನ್ ಟೀಮಿನಲ್ಲಿದ್ದಾನೆಂದು ಭಾವಿಸೋಣ. ಅವರು ಟಾಸ್ ಗೆದ್ದರಂತೂ ತೀರಿಹೋಯ್ತು. ನಾವೇ ಗೆದ್ದರೂ ಅವರನ್ನು ಬ್ಯಾಟಿಂಗಿಗೆ ಕಳಿಸುವುದು. ಮೊದಲ ಓವರಿನಲ್ಲಿ ಎರಡು ಬಾಲು ಗುರಿ ತಪ್ಪಿದರೂ ನಾಲ್ಕು ಜನರ ನಿರ್ಗಮನ. ಆ ಕಡೆ ನಿಂತು ಇನ್ನೊಂದು ಓವರಿಗೆ ಇನ್ನಿಬ್ಬರು. ಅಂಪೈರ್ ಕೆಂಜಡಿಯನನ್ನು ಥ್ರೋಯಿಂಗಿಗೆ ಕಾಲ್ ಮಾಡಿದರೆ ಕೆಂಜಡಿಯ ಎಷ್ಟೋ ಜನರ ಕೈಲಿ ಏತೇತರಿಂದಲೋ ಒದೆ ತಿಂದವನಾದುದರಿಂದ ಲೆಕ್ಕಿಸುವುದಿಲ್ಲ, ಟೈಂಸ್‌ನಲ್ಲಿ Remarkable Bowling by Kenjadiya, windies wilt ! ಎಂದೂ ಫ್ರೀಪ್ರೆಸ್ಸಿನಲ್ಲಿ Here comes Kenjadiya, wizard with the leather ಎಂದೂ ಬರೆಯಬೇಕು. ಸ್ಕೋರ್ ಬೋರ್ಡ್ ಹೀಗೆ:

W. Indies 1 Innings.

ಮೆಕ್ ಮಾರಿಸ್ (ಒದೆ ತಿಂದು ಹಿಂತಿರುಗಿದರು)	— 0
ಹಂಟ್ (ಒ. ಹಿಂ.)	— 0
ವೊರೆಲ್ (ಒ. ಹಿಂ.)	— 0
ಕನ್ ಹಾಯ್ (ಹಾಯ್ ಹಾಯ್ ಒ. ಹಿಂ.)	— 0

ಸೋಬರ್ಸ್ (ಬ. ಹಿಂ.)	— 0
ನರ್ಸ್ (ಬ. ಹಿಂ.)	— 0
ಹಾಲ್ b ಪ್ರಸನ್ನ	— 0
ವಾಟ್ಸನ್ b ಪ್ರಸನ್ನ	— 0
ಸ್ಪೇಯರ್ಸ್ b ಪ್ರಸನ್ನ	— 0
ಮೆಂಡೊಂಕಾ b ವಿಶ್ವನಾಥ್	— 0
ಗಿಬ್ಸ್ (ನಾ. ಔ.)	— 0
ಎಟ್‌ಸೆಟ್ರಾ (ನಾ. ಔ.)	— 16
ಒಟ್ಟು	—16

ನಮ್ಮ ಫಸ್ಟ್ ಇನ್ನಿಂಗ್ಸಿನಲ್ಲಿ ಅವರಿಗೆ A wicket keeper for a batsman and a bowler for a bumper ಎಂಬ ಸೂತ್ರವನ್ನನ್ವಯಿಸಬೇಕು.

ಉಳಿದುದೇನು? ಆಪರೇಷನ್‌ಗಳಾಗುತ್ತವೆ. ವೊರೆಲ್ ಸೋಬರ್ಸರಿಗೆ ರಕ್ತದಾನ ಮಾಡುವ ಮಂದಿ ಹಿಂಡು ಹಿಂಡಾಗಿ ಆಸ್ಪತ್ರೆಗೆ ಬರುತ್ತಾರೆ! ದೇಶದಾದ್ಯಂತ ಶೋಕ ಸಪ್ತಾಹ, ಪ್ರಾರ್ಥನಾ ಸಭೆಗಳು ನಡೆಯುತ್ತವೆ!

This is cricket ಎಂದು ನಮ್ಮ ಪತ್ರಿಕೆಗಳು ಬರೆಯುತ್ತವೆ. ನಮ್ಮ ರಾಯಭಾರಿಗಳು ವಿಶ್ವದಾದ್ಯಂತ ಮಾನವ ಭ್ರಾತೃತ್ವ. ಅಹಿಂಸಾ ಮಾರ್ಗಗಳನ್ನು ಜನತೆಗೆ ವಿವರಿಸುತ್ತಾರೆ.

'ಟೆಸ್ಟ್ ಕ್ರಿಕೆಟ್ಟಿನಿಂದ ನಿವೃತ್ತನಾಗಲು ನಾನು ನಿರ್ಧರಿಸಿದ್ದೇನೆ. ಆದರೆ ಯಾರಾದರೂ ದಿಮಾಕು ಮಾಡಿದರೆ ನನ್ನ ಮಾತೃಭೂಮಿಯ ಸೇವೆಗೆ ಸದಾ ಸಿದ್ಧ' ಎಂದು ಕೆಂಜಡಿಯ ಹೇಳಿಕೆ ಕೊಟ್ಟು ಕೊಳಾಳು ಗೊಲ್ಲರ ಹಟ್ಟಿಗೆ ಹಿಂತಿರುಗುತ್ತಾನೆ.

ನಾವು ಸೂಚಿಸಿದ ಈ ಮಾರ್ಗವನ್ನನುಸರಿಸಿದರೆ ವೆಸ್ಟಿಂಡೀಸರ ಒಣ ದಿಮಾಕು, ಹಮ್ಮು ಮುರಿಯುತ್ತದೆ. ಯುಗಾದಿ ಹಬ್ಬಕ್ಕೆ ನಮ್ಮೂರಿಗೆ ಬಾ. ಕೆಂಜಡಿಯನ ಪರಿಚಯ ಮಾಡಿಕೊಡುತ್ತೇವೆ.

ಖಂಡಿತ ಉತ್ತರ ಬರೆ, ವಜ್ರಂ ವಜ್ರೇನ ಭಿದ್ಯತೇ ಎಂಬುದನ್ನು ಮರೆಯಬೇಡ. ದೇವರು ನಿನಗೆ ಒಳ್ಳೇದು ಮಾಡಲಿ.

ಎಂದು

ನಾವು

(ಕೊಟ್ರರಾಯ).

—ಅ. ರಾ. ಸೇ.

ಗಾಂಪರ ಗುಂಪು

"ಇಂಡಿಯಾ ಕ್ಲಬ್ಬಿನಲ್ಲಿ"

'ಇದೇ ಮಹಾ ಸುದಿನಾ' ಎಂಬ ಹಳೇ ವಸಂತಸೇನೆಯ ಹಾಡನ್ನು ಗುರುಗಳು ಗುನುಗುತ್ತಿದ್ದರು. 'ಘ' ಮಹಾ ಗಾಂಪನು ಮಸಾಲೆದೋಸೆ ಸಿಗುವ ಹೋಟೆಲನ್ನು ಲಂಡನ್ನಿನಲ್ಲಿ ತೋರಿಸಿದ್ದ. ಟ್ರಫಾಲ್ಗರ್ ಚೌಕದಿಂದ ಕೊಂಚ ಉತ್ತರಕ್ಕೆ ತಿರುಗಿ ಬಲಬದಿಗೇ ಇರುವ ದೊಡ್ಡ ಲಯನ್ಸ್ ಫಳಾರ ಮಂದಿರದ ಪಕ್ಕದ ಸಂದಿನಲ್ಲಿ ತಿರುಗಿದರೆ ಬೆಳ್ಳಿಯ ಹಲಗೆಯ ಮೇಲೆ 'ಕ್ರ್ಯಾವನ್ ಸ್ಟ್ರೀಟ್' ಎಂದು ಕರಿಯ ಅಕ್ಷರಗಳಲ್ಲಿ ಬರೆದಿರುವುದು ಕಾಣುತ್ತದೆ. ಅದೇ ರಸ್ತೆಯಲ್ಲಿ ನಡೆದು ಹೋದಾಗ ಎಡಗಡೆಗೆ ಒಂದು ಹಳೇಕಾಲದ ಮನೆ ರಸ್ತೆಯ ಬದಿಗೇ ಅಂಟಿಕೊಂಡಿರುವುದು ಕಾಣಬಹುದು. ಆ ಮನೆಯ ಗೋಡೆಯ ಮೇಲೆ "INDIA CLUB" ಎಂಬ ಒಮ್ಮೆ ಹೊಳೆಯುತ್ತಿದ್ದ ಹಿತ್ತಾಳೆ ಬೋರ್ಡು ಕಾಣುತ್ತದೆ.

ಮುಂಬಾಗಿಲನ್ನು ತೆಗೆದು ಹೋದ ಕೂಡಲೇ ನೆಲಮಾಳಿಗೆಯಿಂದ ಭಾರತೀಯ ಮಸಾಲೆಯ ಘಮಘಮ ಎಂಬ ಆಪ್ಯಾಯಮಾನ ವಾಸನೆ ಮೂಗಿಗೆ ಬಂದಡರುತ್ತದೆ. ಈ ಇಂಗಿನ ವಗ್ಗರಣೆಯ ವಾಸನೆ ಮೂಗಿಗೆ ಬಡಿದಾಗಲೇ ಗುರು ಗಾಂಪರು 'ಇದೇ ಮಹಾಸುದಿನ' ಎಂದು ಎಗರಲಾಡಿದರು. ಊಟದ ಮನೆ ನೆಲಮಾಳಿಗೆಯಲ್ಲಿತ್ತು, ಹೋಗಿ ಕೂತರು. ಹಿಂದಿನ ರಾತ್ರಿ ದೊರ್ಸಾನಿ ಗುರುಗಳಿಗೆ ಹುಳಿ ಮಾಡಿ ಹಾಕಬೇಕೆಂದು ಬೇಳೆ ಬೇಯಿಸಿ ಟೊಮ್ಯಾಟೋ ಹೆಚ್ಚಿ ಹಾಕಿ ಎರಡು ಈರುಳ್ಳೀನು ಹೆಚ್ಚಿ ಹಾಕಿ ಕುದಿಸಿ ಬೇಯಿಸಿದಾಗ ಆಕೆಗೆ ಒಂದು ಯೋಚನೆ ಬಂದಿತ್ತು. ಈ ಹುಳಿಗೆ ಸೊಗಸಾದ ದ್ರಾಕ್ಷಿ ಹಾಕಿದರೆ ಯುಲ್‌ಬ್ರೆನ್ನರನು ಖುಷಿಯಿಂದ ಸುರಿದುಕೊಳ್ಳುವನೆಂದು ಅರಪಾವು ದ್ರಾಕ್ಷಿ ಸುರಿದಿದ್ದಳು.

ಊಟದ ಮೇಜಿನ ಮೇಲೆ ಬಿಳಿಯ ಪಿಂಗಾಣಿ ಬೋಗುಣಿಯಲ್ಲಿ ಪಾವು ಹುಳಿ ಬಡಿಸಿದಾಗ ಗುರುಗಳು ಆನಂದದಿಂದ ಒಂದು ಚಂಮ್ಚ ಬಾಯಿಗಿಟ್ಟಾಗ ಇಂಗು ತಿಂದ ಮಂಗನ ಹಂಗೆ ಥಂಗನೆ ನೆಗೆದರು. "ಅಯ್ಯೋ ಮಜ್ಜಿಗೇ ಹುಳೀಲಿ ಬಾಳೇಹಣ್ಣು ಕಿವಿಚಿದವರುಂಟೆ? ಶಾವಿಗೇಖೀರಿಗೆ ವಗ್ಗರಣೆ ಹಾಕಿದವರುಂಟೆ? ಖಾರದ ಕೋಡುಬಳೆಯನ್ನು ಕೇಸರೀಭಾತ್‌ಲ್ಲಿ ಮುರಿದು ಮೆದ್ದವರುಂಟೆ? ಶಿವ ಶಿವಾ ಗುರು ಗಾಂಪನಿನ್ನೇನು ಕಾಣಬೇಕೊ ತಿಳಿಯೆನಲ್ಲಾ"-ಎಂದು ಮಂಕನು ತನ್ನದೇ ವಚನ ಮಾಡಿ ಹೇಳಿದ್ದ. ಉಪ್ಪಿಲ್ಲ ಹುಳಿ ಇಲ್ಲ ಖಾರವಿಲ್ಲದ ಬೇಳೆ ಟೊಮ್ಯಾಟೋ ಈರುಳ್ಳಿ ಜತೆ ದ್ರಾಕ್ಷಿ ಹಾಕಿ ಹುಳೀ ಮಾಡಿದ ಈ ಮಹರಾಯಿತಿ ರುಚಿಗೆ ಅಳಲಾರದೆ ನಗಬೇಕಿತ್ತು. ಆದರೆ ಇದರ ಹಿಂದಿದ್ದುದು ಒಂದೇ ಒಂದು ದೊರ್ಸಾನಕ್ಕ 'ಗುರುಗಳಿಗಾಗಿ' ಎಂದು ಪ್ರೀತಿಯಿಂದ ಮಾಡಿದ ಸಾಂಬಾರ್ ಇದು-ಎಂಬ ಅಭಿಮಾನದಿಂದ ಸುರಿದುಕೊಳ್ಳಬೇಕಾಗಿತ್ತು-ಗುರುಗಳು ಹಾಗೇ ಮಾಡಿದ್ದರು

ಶಿಷ್ಯರ ಕೈಲಿ ಬಲವಂತವಾಗಿ ಕುಡಿಸಿದ್ದರು. ಸದ್ಯ ತಿಂದು ಮುಗಿಯಿತು ಎಂದು ಕೇಗಿದಾಗ ತಾನು ಮಾಡಿದ ದ್ರಾಕ್ಷಿ ಹುಳಿಯನ್ನು ಆಪ್ಯಾಯಮಾನವಾಗಿ ಬಸಿದುಕೊಂಡ ಗುರುಗಳ ಬೋಗುಣಿಗೆ ಮತ್ತಷ್ಟು ಅದೇ ಹುಳಿಯನ್ನು ಸುರಿದಾಗ ಗುರುಗಳು ಮೂರ್ಛೆ ಹೋಗಿದ್ದರು.

ಅಂತಹ ಹಿಂದಿನ ರಾತ್ರಿ ಹುಳಿಗೂ-ಇಂಡಿಯಾಕ್ಲಬ್ಬಿನ ಇಂತಹ ಸೊಗಸಾದ ಸಾಂಬಾರ್‌ಗೂ ಹೋಲಿಸಿದಾಗ-ಇಂಗಿನ ಪಾನಕಕ್ಕೂ ಕೆಂಪು ಕಲ್ಸಕ್ರೆ ಪಾನಕಕ್ಕೂ ಹೋಲಿಸಿದಂತಿತ್ತು.

"ಮಡಿಯಾ-ಮಸಾಲೆದೋಸೆ ಇದೇನೊ ಕೇಳೋ"

"ಉಪ್ಪಿಟ್ಟಿ ವಾಸನೆ ಬರ್ತದಲೇ"

"ಮಾವಿನಕಾಯಿ ಉಪ್ಪಿನಕಾಯಿ ತಿಂತಿದ್ದಾರೆ ಆ ಮೇಜಿನಲ್ಲಿ"

"ಮಜ್ಜಿಗೆ ಹುಳಿ"

"ಹಪ್ಪಳ"

"ಪಲ್ಯ"

"ಕೇಹೆ!-ಈ 'ಘಾ'ನಿಗೆ ನಾವು ಆಜೀವಪರ್ಯಂತ ಚಿರಋಣಿಗಳಾಗಿರಬೇಕು ಗುರುಗಳೇ"

"ಅಯ್ಯೋ-ಗುರೂಜೀ....ಹೊಳೆಯುವ ತಿಳಿಸಾರನ್ನು ಬಡಿಸುವ ಆ ಕೊಣಪಿಯ ಸೊಗಸು ನೋಡಿ ಗುರೂವೆ!"

— ಹೌದು ಇಂಡಿಯಾಕ್ಲಬ್ಬಿನಲ್ಲಿ ಎಲ್ಲರಿಗೂ ಬಡಿಸುತ್ತಿದ್ದಳು ಒಬ್ಬ ಕೊಣಪಿ-ಕೊಣಪಿ ಅಂದರೆ ತೀರಾ ಬ್ಯಾರಲ್ ಆಕಾರವಲ್ಲ ಎತ್ತರಕ್ಕೆ ತಕ್ಕ ತೂಕ-ಐದೂ ಮುಕ್ಕಾಲು ಅಡಿ ಎತ್ತರ ಅದಕ್ಕೆ ತೂಕ-ಅಲ್ಲಿ ಆಕೆ ಕೆಲಸಕ್ಕಿದ್ದಳು. ಜೊತೆಗೊಬ್ಬ ನಾಯರ್-ಅಡಿಗೆಮನೆಯಲ್ಲಿ ಮದ್ರಾಸಿ ಅಡಿಗೆಯವ. ಇಣಿಕಿನೋಡಿದಾಗ ತೆರೆಯ ಮರೆಯಲ್ಲಿ ತುಟಿಯ ನಡುವೆ ಸಿಗರೇಟು ಸೆಕ್ಕಿ ಪ್ಯಾಂಟು-ಟೈ-ಗಳೊಡನೆ ಪೂರಿ-ಪರೋಟ ಲಟ್ಟಿಸುತ್ತಿದ್ದ, ಹಾಗೇ ತಮಿಳು ಹಾಡು ಗುನುಗುತ್ತಾ, ನೆಲಮಾಳಿಗೆಯಲ್ಲಿನ ಈ ಊಟದ ಮನೆಯಲ್ಲಿ ಹತ್ತು ಮೇಜು ಹರಡಿದ್ದರು. ಒಂದರಮೇಲೂ ಖಟ್ಟಿಇಲ್ಲ. ದಕ್ಷಿಣ ಇಂಡಿಯಾದ ಊಟಕ್ಕಾಗಿಯೇ ಇಲ್ಲಿಗೆ ಬರಬೇಕು-ಅಂದಮೇಲೆ ಮೇಜಿನ ಮೇಲೆ ಕೂತವರೆಲ್ಲಾ ನಮ್ಮವರೇ!!!

"ವ್ಹಾತ್ ಆರ್ ಯು ಗೋಯಿಂಗ್ ತು ಹ್ಯಾವ್ ಜೆಂತಲಮನ್"

—ಎಂದು ಟೈಪ್ ಮಾಡಿದ ಊಟದ ಪಟ್ಟಿ ಗುರುಗಳು ಶಿಷ್ಯರು ಕೂತ ಮೇಜಿನ ಮುಂದೆ ನಿಂತು ಕೇಳಿದಳು ಆ ಕೊಣಪಿ. ಒಂದು ಕ್ಷಣ ಆಕೆಯ ಮಧ್ಯಮ ವಯಸ್ಸೌಂದರ್ಯವನ್ನು ನೋಡಿ ಗುರುಗಳು ಮಂಕನಿಗೆ ಊಟ ಹೇಳುವಂತೆ ಸೂಕ್ಷ್ಮವಾಗಿ ತಿಳಿಸಿ ಆಕೆಯನ್ನೇ ನೋಡತೊಡಗಿದರು. ದೊರಸ್ವಾಮಿ ಜೊತೆಗಿರಲಿಲ್ಲ. ಮಂಕ ಊಟ ಹೇಳತೊಡಗಿದ. ಆಕೆ ಬರೆದುಕೊಳ್ಳತೊಡಗಿದಳು.

"ರೈಸ್-five full-ಸಾಂಬಾರ್-ವೆಜಿಟಬಲ್‌ಕರಿ-ಪಪ್ಪಡ್-ಪಿಕ್ಕಲ್-Sorry ಪಿಕ್ಕಲ್-ಪರೋಟ"

" ಉದ್ ಯು ಲೈಕ್ ತು ಹ್ಯಾವ್ ಎನಿ ಡ್ರಿಂಕ್ಸ್ ಸರ್ "

" ಅದೂ ಉಂಟೇನಮ್ಮ ಇಲ್ಲೀ...."

" five Bitter Beer with Ice please "

—ಎಂದಾಗ ಆ ಮಹಿಳೆ ಮಹಡಿ ಮೆಟ್ಟಲ ಹಿಂಬದಿಗೆ ಹೋಗಿ ಮುಖ ಮೇಲೆ ಮಾಡಿ ಐದು ಗಳಾಸು ಬೇಕೆಂದು ಕೂಗಿ ಹೇಳಿದಳು-ಮೇಲಿಂದ ಅಮೃತ ಇಳಿದುಬಂದಂತೆ ತೊಟ್ಟಿಲಲ್ಲಿ ಸೊಗಸಾದ ಐದು ಗಳಾಸು ಬೀರು ಇಳಿದು ಬಂತು. ಮೇಲಿದ್ದ ಬಾರ್ ಕೌಂಟರಿನ ಬಾರ್‌ಮೇಯ್ಡು ಕೆಳಗೆ ಕಳಿಸಿದಳು. " ಸೊಗಸಾದ ಏರ್ಪಾಟು-ಆದರೆ-ಗುರುಗಳೇ ಇಲ್ಲಿ ಎಲ್ಲಾ ನಮ್ಮ ನೇಟಿವ್ ಅಡಿಗೆಗಳೇ ಆದಮೇಲೆ ಡ್ರಿಂಕ್ಸ್ ಮಾತ್ರ ನೇಟಿವ್ ಇಡದೆ ಫಾರಿನ್‌ಗೇ ಜೋತುಬಿದ್ದಿರುವುದು ಅಕ್ಷಮ್ಯ ಅಪರಾಧ ಸಾರ್...."

" ಅಂದ್ರೇನೂ ಈಚಲಮರದವ್ನನ್ನು ಪೀಪಾಯಿಂದ ಸುರಿದುಕೊಡಬೇಕೇ ಮುಠ್ಠಾಳಾ....ಷಟ್‌ಅಪ್ "-ಎಂದಾಗ ಶಿಷ್ಯರೆಲ್ಲರೂ ತುಟಿಯ ನಡುವೆ ಬೀರ್‌ಗ್ಲಾಸ್ ಇಟ್ಟು ಬಾಯಿ ಮುಚ್ಚಿದರು.

ಈ ಇಂಡಿಯಾಕ್ಲಬ್ಬಿಗೂ ಕೃಷ್ಣಮೆನನಿಗೂ ಬಾದರಾಯಣ ಸಂಬಂಧ ಉಂಟಂತೆ, ಆತ ಇಲ್ಲಿದ್ದಾಗ ತನ್ನೂರಿನವರ ಊಟಕ್ಕಾಗಿ ಈ ಓಟ್ಲು ತೆಗೆದಿದ್ದನೆಂದು ವದಂತಿ. ಇದ್ರೂ ಇದ್ದೀತು-ಲಂಡನ್ನಿಗೆ ಬಂದಾಗೊಮ್ಮೆ ಈ ಓಟ್ಲಲ್ಲಿ ಚಹಾ ಕುಡಿ ಯದೆ ಹೋಗ್ಬೋಲ್ಲವೆಂದು ಕೇಳಿಬಲ್ಲವರಾಗಿದ್ದರು ಗಾಂಪರೊಡೆಯರು.

ನೀರೂ ಬಂದು ಕೂತಿತ್ತು. ಬಡಿಸುತ್ತಿದ್ದ ಆಯಮ್ಮ ಇಂಗ್ಲಿಷಿನವಳಲ್ಲವೆಂದು ಆಕೆಯ ಇಂಗ್ಲೀಷ್ ಉಚ್ಚಾರಣೆಯೇ ಹೇಳುತ್ತಿತ್ತು. ಆಕ ಬಂದು ಅನ್ನ ಬಡಿಸಿ

" ಉದ್ ಯು ಲೈಕ್ ತು ಹ್ಯಾವ್ ಮಷಾಲಾದೋಸಾ " ಎಂದು ಕೇಳಿದಳು.

" ಯಸ್ ಅವರ್ ಗುರೂಜಿ-ವ್ಹೆನ್ ಉಪವಾಸಿಂಗ್....ಅದೇ ಬ್ಯಾಕ್ ಅಟ್ ಹೋಂ....ಹಿ ಮಸ್ಟ್ ಈಟ್ ವಿದ್ಯಾರ್ಥಿ ಭವನ್ ಮಸಲ್‌ದೊಸ್....ವ್ಹೈ ನಾಟ್ ನಾ!! ಗುರುಗಳೇ ಮಸಾಲೇನೂ ಹೇಳಿಬಿಡ್ತಿನಿ " ಎಂದು ಐದು ದೋಸೆಗೂ ಹೇಳಿಬಿಟ್ಟರು ಈ ಹೋಂ-ಸ್ವೀಟ್‌ಹೋಂ ಊಟ ತಿಂಡಿಗೆ ಏನು ಬಿಲ್ಲಾದೀತೆಂಬ ಅರಿವಿಲ್ಲದ ಆರ್ಡರು ಮೇಲೆ ಆರ್ಡರು ಮಾಡಿಬಿಟ್ಟರು.

ಈ ಇಂಡಿಯಾಕ್ಲಬ್ಬಿನಲ್ಲಿ ಇನ್ನೊಂದು ಸೌಕರ್ಯವೆಂದರೆ ನಮ್ಮ ಸ್ವಂತ ಕೈಯಲ್ಲಿ ನಾವೇ ಸ್ವತಹ ಊಟ ಮಾಡಬಹುದು-ಚಂಚ-ಫೋರ್ಕು-ಕತ್ತಿಗಳಲ್ಲಿ ಕೈ ಮೈ ಕೊಯ್ದುಕೊಂಡು ವದ್ದಾಡಿದ ಗಾಂಪರ ಗುಂಪಿಗೆ ಹುಳಿ ಸುರಿದುಕೊಂಡು-ಅನ್ನ ಕಲಸಿ-ತೋರುಬೆರಳನ್ನು ಮಾವಿನಕಾಯಿ ಉಪ್ಪಿನಕಾಯಿಯಲ್ಲಿ ಅದ್ದಿ ' ಲೊಚ್ ' ಎಂದು ಮಜವಾಗಿ ಲಟಿಗೆ ಹೊಡೆದಾಗ ಸ್ವರ್ಗಕ್ಕೆ ಮೂರೇ ಬೆರಳು ಬಿಟ್ಟಿತ್ತು.

ವಾರಗಳು ಈ ಸ್ಪೂನುಗಳಲ್ಲಿ ಕಳೆದಾಗ-ಅನ್ನವನ್ನೇ ಕಾಣದೆ ಬ್ರೆಡ್ಡು ಬೆಣ್ಣೆ-ಗಳಲ್ಲಿ ಪರದೇಶಿಗಳಾದಾಗ-ಸ್ವಯಂ ಕೈಯಲ್ಲಿ ಅನ್ನ ಹುಳಿ ಕಲಿಸಿ ಸುರಿದುಕೊಂಡಾಗ ಅದರ ಮಜ ಅನುಭವಿಸಬೇಕಲ್ಲದೆ ಬರೆದು ಪ್ರಯೋಜನವಿಲ್ಲ.

ಎಂದೂ ಅನ್ನ ಕಾಣದವರಂತೆ ಕಂಠಪೂರ್ತ ವರಸೆ ವರಸೆಯಾಗಿ ಊಟ ಮಾಡಿ ಆನಂದಪಟ್ಟುಬಿಟ್ಟರು ಸುತ್ತಲೂ ಕೂತ ನಮ್ಮವರು ಈ ಗುರು ಶಿಷ್ಯರನ್ನ ಕಂಡು ತವರೂರಿನವರ ಬಗ್ಗೆ ಕುತೂಹಲ ತೋರಿಸಿ ಕೆಲವರು ಕೈಕುಲಕಿದರು ಠೊಣಪಿ ಪರಿಚಾರಕಿ ಬಂದು-ಕೈಯಲ್ಲಿ ಬಿಲ್ಲು ಹಿಡಿದು "ಅವಲಕ್ಕಿ-ಪವಲಕ್ಕಿ ಕಾಂಚಿನಿ-ಮಿನಿಮಿನಿ ಢಾಂ-ಢೂಂ-ಢಸ್ಸ-ಪುಸ್ಸ-ಕೊಂಯ ಕೊಟ್ರ" ಎಂದು ಏನೇನೋ ತನ್ನ ಭಾಷೆಯಲ್ಲಿ ಲೆಕ್ಕ ಹಾಕಿ ಒಟ್ಟು 63 ಷಿಲಿಂಗು ಎಂಟು ಪೆನ್ನಿ ಎಂದು ಹೇಳಿದಳು.

"ನಿಮ್ಮೂರು ಯಾವುದು ತಾಯಿ"-ಮಂಕ

"ಮೈಲ್ಯಾಂಡ್-ಪೋಲಿಷ್ ಲೇಡಿ ಐ ಆಮ್"

"ಓಹೊಹೊ ... ಪೋ....ಬ್ಯಾಂಡ್....ಹೋಗೋಂತ ಅಲ್ವಾ ಪೋ ಅಂದ್ರೆ"

"ನೀನು ತಿಪ್ಪನಿರೋ ಮಡೆಯಾ-ಪೋಲಿ ಅಂತ ಹೇಳ್ತಿದಾಳೆ ಆಯಮ್ಮ.... ಏನೋ ಮಾತಾಡ್ತಾನೆ" ಮರುಳ.

"ಷಟ್ ಅಪ್-ಪೋಲ್ಯಾಂಡ್ ಅನ್ನೊ ದೇಶದವಳು-ಹಾಗೆಲ್ಲಾ ಹರಟಬೇಡ್ರೊ ಆಕೆ ಲೆಖ್ಖಾ ಹಾಕಿದ್ದು ತನ್ನ ಭಾಷೇಲಿ-ನಾವ್ಗಳು ಲೆಖ್ಖಾಚಾರ ಮಗ್ಗಿ ಎಣಿಸ್ಕೊಳ್ಳೊವಾಗ ಕನ್ನಡದಲ್ಲೇ ಎಣಿಸಿಕೊಳ್ಳೊಲ್ವೆ? ಹಾಗೆ ..." ಗುರುಬೋಧೆ.

"ಅಬ್ಬಬ್ಬ 63 ಷಿಲಿಂಗೂಂದ್ರೆ ಮೂರು ಪೌಂಡು-ಮೂರು ಷಿಲಿಂಗು-ಗುರುಗಳೇ ನಮ್ಮ ಊಟಕ್ಕೆ ಒಪ್ಪತ್ತಿಗೆ ಸುಮಾರು ನಮ್ಮೂರು ದುಡ್ನಲ್ಲಿ 50 ರೂಪಾಯಿ ಆಯ್ತಲ್ಲಾ"

"ತಲೆ ಬೋಳು"

"ನಮ್ಮ ಸ್ಕೂಲುಮೇಷ್ಟ್ರ ತಿಂಗಳ ಸಂಬಳ"-ಮುಠ್ಠಾಳ

"ಏರ್ ಕ್ರಾಫ್ಟೆಂದು ತುಟ್ಟಿಭತ್ಯ"-ಮಡೆಯ

"ಶಾನುಭೋಗ ಶೀನಪ್ಪನ ವರ್ಷದ ಪೋಟಿಗೆ"-ಮಂಕ.

"ಗುರ್ಗೋಳೇ ನಾವು ಹತ್ತುಘಂಟೆಗೆ ಎದ್ದು ಹತ್ತೂವರೆಗೆ ಬ್ರೇಕ್ ಫಾಸ್ಟ್ ಮುಗಿಸಿದಾಗ ಬೆಳಗಿನ ಊಟವೇ ಮುಗಿದು ಹೋದ ಹಾಗಿರುತ್ತೆ-ಬೆಡ್ ಮತ್ತು ಬ್ರೆಕ್ ಫಾಸ್ಟ್ಗೆ ಗುರ್ರಾನಿಗೆ ದಿನಕ್ಕೆ ಆಳಿಗೆ ಹತ್ತು ಷಿಲಿಂಗೂಂದ್ರೂ ಏಳುರೂಪಾಯಲ್ಲಿ ಕಾಲಾಹಾಕಬಹುದು-ಒಂದು ಊಟಕ್ಕೇ ಈ ಪಾಟ ಖರ್ಚೂಂದ್ರೆ ಮರುಳ ಇಲ್ಲೇ ಕೆಲಸಕ್ಕೆ ಸೇರಬೇಕಾದೀತು....ಇದು ತಲೆಬೋಳು ಸಮಾಚಾರ"

—ಎಂದು ಆ ಪೋಲೆಂಡಿನ ಪರಿಚಾರಿಣಿ ಗಿಣಿಯಂತೆ ಪೋಲೆಂಡ್ ಗಂಟ್ಲಲ್ಲಿ ಇಂಗ್ಲೆಂಡ್ ಮಾತಾಡುತ್ತಾ ಕೊಟ್ಟ ಬಿಲ್ಲಿಗೆ ಹಣ ತೆತ್ತು ಹೊರ ಬಂದರು ಬರುತ್ತಾ ದಾರಿಯಲ್ಲಿನ ಮೇಜಿನ ಮೇಲಿದ್ದ ತಟ್ಟೆಯಲ್ಲಿ ಬಣ್ಣಾ ಕಟ್ಟಿದ ಅಡಿಕೆ ಪುಡಿ ಇತ್ತು. ಒಬ್ಬೊಬ್ಬರೂ ಹಿಡಿ ಹಿಡಿ ಜೇಬಿಗೆ ತುಂಬಿ ಮೆಟ್ಟಲುಹತ್ತಿ ಲೌಂಜಿಗೆ ಬಂದರು. ಭಾರತೀಯರ ಗತವೈಭವದ ನೆನಪು ತರುವ ದರ್ಬಾರ್ ಸೀನಿನಲ್ಲಿಡುವಂಥ ನಾಲ್ಕು ಕುರ್ಚಿ-ಒಂದು ಮೇಜು ಅದರ ಮೇಲೆ ನಾಲ್ಕು ಹಳೇ ಹಿಂದೂಪೇಪರು-ಬೆಂಕಿ ಇಲ್ಲದ

ಅಗ್ಗಿಷ್ಟಿಗೆ-ಮೂಲೆಯಲ್ಲೊಂದು ಪಿಯಾನೋ ವಾದ್ಯಗಳಿದ್ದವು. ಮಂಕ ಕುರ್ಚಿಯನ್ನೆಳೆದುಕೊಂಡು ಪಿಯಾನೋ ಮುಂದೆ ಕೂತು "ಡ್ರ್ಯೊಂ" ಅನ್ನಿಸಿದ-ಏನು ಸ್ಫೂರ್ತಿ ಬಂತೋ ಪ್ರತಿಭಾವಂತ ಪಿಯಾನೋ ಮಾಸ್ತರನಂತೆ ಭಾವೋದ್ವೇಗ ಪೀಡಿತನಾಗಿ ಎರಡೂ ಕೈಯ್ಯಲ್ಲಿ ಪಿಯಾನೋ ಮನೆಗಳನ್ನು ಕುಕ್ಕಿ ಪೀಡಿಸುತ್ತಾ ಮಠದ ಭಜನೆ ಪದವಾದ

"ರಾಮ ಬೋಲೋ-ನಾಮ ಬೋಲೀ-
ಕೃಷ್ಣ ಬೋಲೊ-ಬೋಲೊ-ಬೋಲೋ-ಲಬೋ ಲಬೋ"

ಎಂಬ ಅಪೂರ್ವ ಪಠಾಣ ಮಿಶ್ರ ಮೋಹಿನಿರಾಗದಲ್ಲಿ ಶಂಖ ಹೊಡೆಯಲು ಪ್ರಾರಂಭಿಸಿದ. ನವ್ಯ ಕಾವ್ಯದಂತೆ-ಅರ್ಥವಾಗದ ವಿಚಿತ್ರ ನವ್ಯ ಚಿತ್ರಕಲೆಯಂತಿತ್ತು ಅವನ ಪಿಯಾನೋ ಹಾಡು. ಇಂಡಿಯಾಕ್ಲಬ್ಬಿನಲ್ಲಿದ್ದ ಭಾರತೀಯರೆಲ್ಲಾ ಬಂದು ಕೆಲವರೆಂದರು ಇದು ಅಪಸ್ಮಾರಿ ರೋಗ ಎಂದು-ಮತ್ತೆ ಕೆಲವರು ಇದು ಹುಚ್ಚಿರಬಹುದೆ? ಎಂದು ಶಂಕಿಸಿದರು-ಮತ್ತೆ ಕೆಲವರು ಇವನನ್ನು ಪೋಲೀಸಿಗೇಕೆ ಕೊಡಬಾರದು? ಎಂದು ಪ್ರಶ್ನಿಸಿದರು. ಆದರೂ ಭಾರತೀಯನೊಬ್ಬನ ಗಂಟಲು ಲಂಡನ್ನಿನಲ್ಲಿ ಮೊಳಗುತ್ತಿದೆ ಎಂಬ ಅಂಧ ಅಭಿಮಾನದಿಂದ ಅನೇಕರು ಸಹಿಸಿಕೊಂಡರು. ಪಠಾಣದಿಂದ ಕದನ ಕುತೂಹಲಿಯಂತೆ ಆರಭಿಗೆ ಎಗರಿದಾಗ ಎಲ್ಲರೂ ಹಾಲುತೆರವು ಮಾಡಿ ಕ್ಲಬ್ಬಿನಿಂದ ಹೊರಬಿದ್ದರು.

ಕಡೆಗೆ ಗುರುಗಳ ಆಜ್ಞೆಯಂತೆ ಮಂಗಳ ಹಾಡಿ ಕೂತ ಕುರ್ಚಿಯಲ್ಲೇ ನಿದ್ರೆ ಹೋದ ಮಂಕ. ಗ್ಯಾಂಪರಗುಂಪೆಲ್ಲ ಹಾಗೇ ಬಹಳ ದಿನದಮೇಲೆ ಹುಳಿ ಅನ್ನ ತಿಂದಿದ್ದರಿಂದ ಕುರ್ಚಿಯಲ್ಲೇ ನಿದ್ರೆ ಹೋದರು.

ಮತ್ತೆ ಎಚ್ಚರವಾದಾಗ ಸಂಜೆಯೇ ಸಮೀಪಿಸಿತ್ತು. ದೂರ್‍ವಾಣಿ ಪೋನು ಬಂದಿದೆ ಎಂದು ನಾಯರ್ ಹೇಳಿದ ಗುರುಗಳು ಓಡಿಹೋಗಿ ಪೋನಿಗೆ ಕಿವಿ ಕೊಟ್ಟರು.

"...."

"ಹೌದು ಡಿಯರ್ ವಿ. ಆರ್. ಸೇಫ್"

"...."

"ಬರ್ತೀನಿ. ಹ್ಯಾಗೂ ಸಂಜೆ ಆಯ್ತು... ಇನ್ಯಾಕೆ ನಿನಗೆ ಎಸರು ಇಡೋ ತೊಂದರೆ!... ರಾತ್ರಿ ಊಟಾನೂ ಇಲ್ಲೇ ಮುಗಿಸಿ ಒಮ್ಮೆಲೇ ಮಲಗೋ ಹೊತ್ತಿಗೆ ಹೌನ್ಸ್ಲೋಗೆ ಬರ್ತೀವಿ- Yes- No.... ಅಂ....ಹುಹುಂ.... Sure ಬರ್ತೀವಿ— ದುಡ್ಡು ಕಡಿಮೆ ಆದ್ರೆ ಮರುಳನ ಕೈಲಿ ಮೂರಾರೆ ತಿಕ್ಕಿಸಿಯಾದರೂ ಇನ್ನೊಂದು ವರಸೆ ಮಜ್ಜಿಗೆ ಹುಳಿತಿಂದೇ ಬರ್ತೆವೆ- ರೈಟ್- ಬೈ ಬೈ.... ಕ್ಲೊಚ್- ಕ್ಲೊ.... See you later ..."

ಗುರುಗಳ ಮಾತಿನ ವರಿಸೆಯಿಂದ ಪ್ರಫುಲ್ಲರಾದ ಶಿಷ್ಯರು ರಾತ್ರಿ ಊಟಕ್ಕೆ ಮತ್ತೆ ಬಾಯಿ ಸರಿಮಾಡಿಕೊಂಡು ರೆಡಿ ಆದರು.

—ದಾಶರಥಿ ದೀಕ್ಷಿತ್.

ಏಪ್ರಿಲ್ ಪ್ರಕಟನೆಗಳು : : ನಿರೀಕ್ಷಿಸಿರಿ

ಎಂ. ಕೆ. ಭಾರತೀರಮಣಾಚಾರ್ಯರ

ಮಹಾಪ್ರಸ್ಥಾನದ ಪಥದಲ್ಲಿ

ಸುಂದರರಕ್ಷಾಪತ್ರ ಬಿಳುಪು ಕಾಗದ ಬೆಲೆ : ೧.೨೫

(ಸುಪ್ರಸಿದ್ಧ "ಯಾತ್ರಿಕ್" ಚಲನಚಿತ್ರ ಕಥಾನಕ)

ಬೀಚಿಯವರ
ತಿಂಮ ಭೋಧಾಮೃತ
೧.೫೦

ಪರ್ವತವಾಣಿಯವರ
ಶೃಂಗಾರಲಹರಿ
೧.೦೦

ಎಚ್. ನರಸಿಂಹಯ್ಯ
ಮುತ್ತುಗದ ಹೂ
೨.೫೦

ಶರತ್‌ಚಂದ್ರರ
ಚಂದ್ರನಾಥ
೧.೫೦

ಇತರ ಕೃತಿಗಳು

ನಾ ಕಸ್ತೂರಿಯವರ
ಚೈನಾ ಜಪಾನ್ ಕತೆಗಳು
೧.೫೦

ನಿರಂಜನರವರ
ಸಂಗಮ ಸ್ನಾನ
೧.೫೦

ಎಚ್. ನರಸಿಂಹಯ್ಯನವರ

ಹೆಬ್ಬುಲಿಯ ಹೆಜ್ಜಾಲ

ತ್ರಿವರ್ಣ ಮುಖಚಿತ್ರ : : ಬೆಲೆ : ಎರಡು ರೂಪಾಯಿ


ರಿಯಾಯಿತಿಗಳು ಎಂದಿನಂತೆ. ಅಂಚೆ ವೆಚ್ಚ ಪ್ರತ್ಯೇಕ

— ಸುದರ್ಶನ ಪ್ರಕಾಶನ —

ತಾರಾ ನಿವಾಸ : : ತಿಪಟೂರು.


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO BANGALORE MADRAS MADURAI BOMBAY

Increase Output



INSTALL

Kirloskar

ESTD. 1888

CENTRIFUGAL PUMPING SETS

Built for rugged and continuous service, KIRLOSKAR pumpsets feature the latest in design development. Increasingly popular in irrigation projects, these pump-sets combine trouble-free service and low maintenance costs. Available in different types and sizes.

For Particulars:

KIRLOSKAR BROTHERS, LTD.,

SRI NARASIMHARAJA ROAD

Post Box 606 : : BANGALORE-2

Printed by B. S. Iyengar, Bangalore City.
Publisher—B. N. Gupta Editor—M. Sivaram.